Rare B.
ಗ್ರಂಥಾಲಯ 1105
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ
056926

# 'ಭಾರತರತ್ನ' ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು

'ರಘುಸುತ'



92B
VIS R;1

ಪರಾಮರ್ಶೆಗೆ ಮಾತ್ರ

ಬಂಗಪ್ಪ ಡಾ. ಗ್ರಂಥ
ವಿಶ್ವವಿದ್ಯಾಲ

25 DEC 1974

ಭಾರತರತ್ನ ಮೋಕ್ಷಗುಂಡಂ

# ವಿಶ್ವೇಶ್ವರಯ್ಯನವರು

**ರಘುಸುತ**

ಪ್ರಧಾನ ಸಂಪಾದಕರು :

**ಅ. ನ. ಕೃ.**

"ಸಿರಿಗನ್ನಡ" ಗ್ರಂಥಾಲಯ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಐ. ಬಿ. ಹೆಚ್. ಪ್ರಕಾಶನ
ಗಾಂಧಿನಗರ ಬೆಂಗಳೂರು-೯.

ಚಿತ್ರಗಳು :
ಚಂದ್ರನಾಥ

ಸರ್ವಸ್ವಾಮ್ಯ
ಪ್ರಕಾಶಕರವು

056926

ಬೆಲೆ : ೧–೫೦

92B
VIS R;1

ಐ. ಬಿ. ಹೆಚ್. ಪ್ರಕಾಶನ
ಗಾಂಧಿನಗರ ಬೆಂಗಳೂರು-೯.
ಇವರ ಪರವಾಗಿ
ಶ್ರೀ ಪಿ. ಎನ್. ಕಾಮತ್
ಇವರಿಂದ
ಪ್ರಕಾಶಿಸಲ್ಪಟ್ಟದೆ.

ಶ್ರೀರಂಗನಿಧಿ ಮುದ್ರಣಾಲಯ
ಶ್ರೀರಂಗನಿಧಿ ಟ್ರಸ್ಟ್
ಶ್ರೀರಾಮಪುರಮ್ ಬೆಂಗಳೂರು-೨೧.
ಇವರಿಂದ ಮುದ್ರಿತ.

25 DEC 1974

# ಭಾರತರತ್ನ
# ಮೋಕ್ಷಗುಂಡಂ
# ವಿಶ್ವೇಶ್ವರಯ್ಯನವರು

29578

ಅಧಿಕೃತ ಮಾರಾಟಗಾರರು :

**ಇಂಡಿಯ ಬುಕ್ ಹೌಸ್**

ಗಾಂಧಿನಗರ, ಬೆಂಗಳೂರು--೯.

# ೧

ಹಿಂದೆ ಗೋಡೆಯಂತಿರುವ ಗೋಪಿನಾಥ ಗುಡ್ಡ, ನಂದಿಬೆಟ್ಟ, ಬ್ರಹ್ಮಗಿರಿ, ಚನ್ನರಾಯಕೊಂಡ, ಕಳವಾರ ಬೆಟ್ಟ, ನರಸಿಂಹ ದೇವರ ಬೆಟ್ಟ ಮತ್ತು ಹರಿಹರೇಶ್ವರ ಬೆಟ್ಟದ ಸಾಲು. ಇದನ್ನು ನಂದೀಮಂಡಲ ಎನ್ನುತ್ತಾರೆ. ಇದರ ಪಾದದ ಬಳಿ ಒಂದು ಪುಟ್ಟ ಹಳ್ಳಿ. ಅದೇ ಮುದ್ದೇನ ಹಳ್ಳಿ. ಅಲ್ಲಿ ಮುಂದೆ, ಎಡಗಡೆ ಒಂದು ಸಣ್ಣ ಹೆಂಚಿನ ಮನೆ ಕಾಣುತ್ತದೆ. ಆ ಮನೆಯಲ್ಲಿಯೇ ಭಾರತರತ್ನ (ಸರ್) ಎಂ. ವಿಶ್ವೇಶ್ವರಯ್ಯನವರು ಶಾಲೀವಾಹನ ಶಕ ೧೭೮೨ ರೌದ್ರಿ ನಾಮ ಸಂವತ್ಸರದ ಭಾದ್ರಪದ ಶುದ್ಧ ಏಕಾದಶಿ ಸೋಮವಾರ ತಾ ೨೭-೮-೧೮೬೦ ರಂದು ಬೆಳಗಿನ ಜಾವ ೬-೨೭ ರಲ್ಲಿ ಜನಿಸಿದರು. ಈ ಸಮಯ ರಾಜಯೋಗದ ಸಮಯ. ವಿಶ್ವೇಶ್ವರಯ್ಯನವರ ಒಂದು ನೂರು ಎರಡು ವರ್ಷಗಳ ಸಫಲ, ಸಾರ್ಥಕ ಜೀವನ ಇದನ್ನು ನಿಜವೆಂದು ತೋರಿಸಿತು.

ಚಿಕ್ಕಬಳ್ಳಾಪುರದ ಪಾಳೆಯಗಾರರ ಬಳಿ ಪ್ರಧಾನಪಂತರು ಎನ್ನುವ ಸಲಹೆಗಾರರು ಇರುತ್ತಿದ್ದರು. ಈ ಪಂತರ ವಂಶದವರೇ ಶ್ರೀನಿವಾಸಶಾಸ್ತ್ರಿಗಳು. ಇವರು ವೇದಾಧ್ಯಯನ ಸಂಪನ್ನರು. ಅಪಾರ ವಿದ್ಯಾವಂತರೂ ಆಗಿದ್ದರು. ವಿದ್ಯಾನ್ವೇಷಣೆಗಾಗಿ ಕಾಲು ನಡಿಗೆಯಲ್ಲಿ ಭಾರತವನ್ನೆಲ್ಲ ಸುತ್ತಾಡಿ ಬಂದಿದ್ದವರು. ಇವರ ಪತ್ನಿ

ವೆಂಕಟಲಕ್ಷಮ್ಮ; ಎಲ್ಲರೂ ಆಕೆಯನ್ನು ವೆಂಕಚ್ಚಮ್ಮನವರೆಂದೇ ಕರೆಯುತ್ತಿದ್ದರು. ಇವರು ಗಟ್ಟಿಮನಸ್ಸಿನ, ಪರೋಪಕಾರಿ ಹೆಂಗಸಾಗಿದ್ದರು. ಇವರ ಎರಡನೆಯ ಮಗುವೇ ವಿಶ್ವೇಶ್ವರಯ್ಯನವರು. ಶಾಸ್ತ್ರಿಗಳು ಕಾಶೀಯಾತ್ರೆ ಮಾಡಿ ಬಂದನಂತರ ಕಾಶೀವಿಶ್ವೇಶ್ವರನ ಕೃಪೆಯಿಂದ ಈ ಮಗು ಜನಿಸಿದ್ದರಿಂದ 'ವಿಶ್ವೇಶ್ವರಯ್ಯ' ಎಂಬಹೆಸರಿಟ್ಟರು. ಶಾಸ್ತ್ರಿಗಳಿಗೆ ಇವರಲ್ಲದೆ ಇನ್ನೂ ಐದು ಮಕ್ಕಳಿದ್ದರು.

ವಿಶ್ವೇಶ್ವರಯ್ಯನವರು ಹುಟ್ಟಿದ ಸಮಯದಲ್ಲಿ ಅವರ ತಂದೆ ಶ್ರೀನಿವಾಸಶಾಸ್ತ್ರಿಗಳಿಗೆ ಬಡತನವಿತ್ತು. ವಿದ್ಯಾರ್ಜನೆಯಲ್ಲಿ ಆಸಕ್ತಿ ಇದ್ದ ಇವರು, ಜಮೀನುಗಳ ಮೇಲುಸ್ತುವಾರಿ ಮಾಡಲಾಗದೆ ಹಿರಿಯರ ಆಸ್ತಿಯಲ್ಲಿ ಬಹು ಭಾಗ ಕಳೆದುಕೊಂಡಿದ್ದರು. ಇದರ ಪರಿಣಾಮವಾಗಿ ಬಡತನ ಇವರ ಮನೆಯನ್ನು ಹೊಕ್ಕಿತು. ಆದುದರಿಂದ ಶಾಸ್ತ್ರಿಗಳು ವೈದಿಕ ವೃತ್ತಿ, ಪೌರೋಹಿತ್ಯಗಳಿಂದ ಕಾಲಯಾಪನೆ ಮಾಡುತ್ತಿದ್ದರು.

ಬಾಲಕ ವಿಶೂ ತನ್ನ ತಂದೆಯೊಂದಿಗೆ ಪೌರೋಹಿತ್ಯದ ಕೆಲಸಗಳಿಗಾಗಿ ಆಗಾಗ್ಗೆ ಕೆಲವು ಹಳ್ಳಿಗಳ ಕಡೆ ಹೋಗುತ್ತಿದ್ದ. ಅಂಥವುಗಳಲ್ಲಿ ಮುದ್ದೇನಹಳ್ಳಿಯಿಂದ ನಾಲ್ಕು ಮೈಲಿ ದೂರದಲ್ಲಿದ್ದ ನೋಶಿಕುಂಟೆ ಹೊಸೂರು ಕೂಡ ಒಂದು. ಅಲ್ಲಿ ಕಸ್ತೂರಿ ರಘುನಾಥಾಚಾರ್ಯರೆಂಬ ಶ್ರೀ ವೈಷ್ಣವ ಜಮೀನ್ದಾರರಿದ್ದರು. ಅವರ ಪತ್ನಿಯವರ ಹೆಸರು ವೆಂಕಟಲಕ್ಷ್ಮಮ್ಮ. ಈಕೆಯನ್ನೂ ಹಳ್ಳಿಯವರೆಲ್ಲ ವೆಂಕಚ್ಚಮ್ಮನವರೆಂದೇ ಕರೆಯುತ್ತಿದ್ದರು. ವಿಶೂಗೆ ತನ್ನ ತಾಯಿಯ ಹೆಸರಿನ ಈ 'ಈ ವೆಂಕಚ್ಚಮ್ಮ' ನನ್ನು ಕಂಡರೆ ತುಂಬಾ ಪ್ರೀತಿ. ಆಕೆಯನ್ನು 'ಪಾಟಿ' (ಅಜ್ಜಿ) ಎಂದು ಕರೆಯುತ್ತಿದ್ದ. ಹೊಳೆಯುವ ಕಂಗಳ, ವರ್ಚಸ್ಸಿನ ಮುಖವುಳ್ಳ, ಸಂಕೋಚಪ್ರವೃತ್ತಿಯ ವಿಶೂವನ್ನು ನೋಡಿದರೆ ಆಕೆಗೆ ಪಂಚಪ್ರಾಣ.

ಶಾಸ್ತ್ರಿಗಳು ಮತ್ತು ವಿಶೂ ಹೊಸೂರಿಗೆ ಹೋದಾಗಲೆಲ್ಲ ಈ 'ಪಾಟಿ' ಯು ವಿಶೂಗೆ ರಾಗಿರೊಟ್ಟಿ, ದೋಸೆ ಇಲ್ಲವೆ ಬೇರೆ ಬೇರೆ ರೀತಿಯ ತಿಂಡಿತಿನಸುಗಳನ್ನು ತಿನಿಸುತ್ತಿದ್ದರು. ಶಿಖೆಯಿಂದ ಕೂಡಿದ ವಿಶೂವಿನ ತಲೆಯನ್ನು ಅಜ್ಜಿಯೇ ಬಾಚಿ, ಜಡೆ ಹೆಣೆಯುವರು. ತಲೆಯ ಮೇಲೆ ಜರಿ ಟೋಪಿ ಇಟ್ಟು, ನೋಡಿ ಆನಂದಿಸುವರು.

ಬೇಸಿಗೆ ಕಾಲದ ಒಂದು ದಿನ ಶಾಸ್ತ್ರಿಗಳು ವಿಶೂವಿನೊಂದಿಗೆ ಹೊಸೂರಿಗೆ ಬಂದರು. ವಿಶೂವನ್ನು 'ಪಾಟಿ' ಯು ಮನೆಯಲ್ಲಿಯೇ ಬಿಟ್ಟು, ಮುಂದಿದ್ದ ಕಂಗಾನ ಹಳ್ಳಿಗೆ ಹೋದರು.

ಪಾಟಿಯು ಹುರಿಟ್ಟಿಗೆ ನೀರು, ಬೆಲ್ಲ, ತುಪ್ಪ ಹಾಕಿ, ಕಲಸಿ, ಉಂಡೆಮಾಡಿ ವಿಶೂವಿನ ಕೈನಲ್ಲಿಟ್ಟರು. ಹಸಿದಿದ್ದ ವಿಶೂ ಆಸೆಯಿಂದ ಅದನ್ನು ತೆಗೆದುಕೊಂಡು, ಬೇಗ ಬೇಗ ತಿನ್ನತೊಡಗಿದ ಆತುರ ಬೇರೆ. ಕೂಡಲೇ ಬಿಕ್ಕಳಿಕೆ ಬಂತು. ಕುಡಿಯಲು ನೀರು ಬೇಕಾಯಿತು. 'ಪಾಟಿ' ಮನೆಯಲ್ಲಿನ ಎಲ್ಲ ಪಾತ್ರೆಗಳನ್ನೂ ನೋಡಿದರು. ಒಂದು ತೊಟ್ಟು ನೀರು ಸಿಗಲಿಲ್ಲ. ಇದ್ದ ನೀರನ್ನು ಹುರಿಟ್ಟಿಗೆ ಹಾಕಿದ್ದರು. ಊರಿಗೆಲ್ಲ ಇರುವುದು ಒಂದೇ ಒಂದು ಸಿಹಿನೀರಿನ ಬಾವಿ. ಅದೂ ಇದ್ದುದು ಊರ ಹೊರಗೆ. ಆ ಸಮಯದಲ್ಲಿ ಅಲ್ಲಿಗೆ ಹೋಗಿ ನೀರು ತರುವುದು ಆಗದ ಮಾತು. ಅಕ್ಕ ಪಕ್ಕದ ಮನೆಗೆ ಹೋಗಿ ನೀರು ಕೇಳಲು ಮಡಿಮಂತಿಕೆಯ ಭಯ. ವಿಶೂ ಒಂದೇ ಸಮನಾಗಿ ಬಿಕ್ಕತೊಡಗಿದ. ಉಸಿರಾಡುವುದೇ ಕಷ್ಟವಾಗಿ, ಕಣ್ಣುಗುಡ್ಡೆಗಳು ಮೇಲೇರತೊಡಗಿದವು. ಕೊನೆಗೆ ಪಾಟಿಗೆ ಏನೂ ಮಾಡಲು ತೋಚದೆ ಮನೆಯಲ್ಲಿ ಮಗುವಿಗಾಗಿ ಇಟ್ಟಿದ್ದ ಹಾಲನ್ನು ಕುಡಿಸಿದರು. ಇದರಿಂದ ಚೇತರಿಸಿಕೊಂಡ ವಿಶೂಗೆ, ಹೋದ ಜೀವ ಬಂದಂತಾಯಿತು. ಪಾಟಿಯು ಅವನನ್ನು ಅಪ್ಪಿ, ಮುದ್ದಾಡಿ ಕಣ್ಣೀರು ಸುರಿಸಿದರು.

"ಅಯ್ಯೋ ನೀರಿನ ತಾಪತ್ರಯವೆ! ನನ್ನ ಮುದ್ದು ವಿಶೂ ಬಂದಾಗಲೇ ಹೀಗಾಗಬೇಕೆ? ನದಿ ಹತ್ತಿರದಲ್ಲಿ ಇದ್ದೂ, ಬೇಸಿಗೆಯಲ್ಲಿ ಕುಡಿಯಲು ನೀರಿಲ್ಲ. ವಿಶೂ, ನೀನು ದೊಡ್ಡವನಾದಮೇಲಿ ಪ್ರಪಂಚದ ಜನರಿಗೆಲ್ಲ ನೀರು ಒದಗಿಸಿ ಕೊಡುವ ಕೆಲಸ ಮಾಡಪ್ಪಾ....

ಪಾಟಿಯ ಈ ಮಾತುಗಳು ವಿಶೂವಿನ ಮನಸ್ಸಿನಲ್ಲಿ ಅಚ್ಚಳಿಯದೆ ನಿಂತವು. ಅವನಿಗೆ ಇದೊಂದು ಮಹದಾಜ್ಞೆಯಂತೆ ಕಂಡಿತು. ವಿಶ್ವೇಶ್ವರಯ್ಯನವರು ಮುಂದೆ ಎಂಜಿನಿಯರ್ ವಿಷಯವನ್ನು ಆರಿಸಿಕೊಳ್ಳಲು ಇದೇ ಕಾರಣವಾಯಿತು.

# ೨

ಮುದ್ದೇನಹಳ್ಳಿಯಲ್ಲಿ ಶಾಲೆ ಇರಲಿಲ್ಲ. ಆಗತಾನೆ ಮೊದಲನೆಯ ಸ್ವಾತಂತ್ರ್ಯ ಹೋರಾಟ ಮುಗಿದಿತ್ತು. ಕಾಲ ಬದಲಾಗಿತ್ತು. ಹೊಸ ಕಾಲದ ಅವಶ್ಯಕತೆಗೆ ತಕ್ಕಂತೆ ಇಂಗ್ಲೀಷ್ ಭಾಷೆಯ ಶಿಕ್ಷಣದಲ್ಲಿ ಅನೇಕರು ಆಸಕ್ತರಾದರು. ಈ ರೀತಿಯ ವಿದ್ಯಾಭ್ಯಾಸ ಕೊಡಿಸಬೇಕೆಂದು ಹೊಸೂರು ಪಾಟ ಮತ್ತು ತಾಯಿ ವೆಂಕಚ್ಚಮ್ಮನವರ ಬಲವಂತ. ಈ ರೀತಿಯ ಶಿಕ್ಷಣ ಚಿಕ್ಕಬಳ್ಳಾಪುರದಲ್ಲಿತ್ತು. ಆದುದರಿಂದ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶ್ರೀನಿವಾಸಶಾಸ್ತ್ರಿಗಳು ಚಿಕ್ಕಬಳ್ಳಾಪುರಕ್ಕೆ ತಮ್ಮ ನಿವಾಸವನ್ನು ಬದಲಾಯಿಸಿದರು. ಅಲ್ಲಿನ ಕಂದವರ ಪೇಟೆಯಲ್ಲಿ ಒಂದು ಚಿಕ್ಕಮನೆಯಲ್ಲಿ ಇರತೊಡಗಿದರು. ವಿಶೂ ಮತ್ತು ಆತನ ಸಹೋದರರು ಶಾಲೆ ಸೇರಿದರು.

ಪ್ರಾಥಮಿಕ ವಿಧ್ಯಾಭ್ಯಾಸ ಮುಗಿಯಿತು. ವಿಶೂ ಮಾಧ್ಯಮಿಕ ಶಾಲೆಗೆ ಸೇರಿದ. ಅಲ್ಲಿ ಬಿ. ವೆಂಕಟಪತಿ ಅಯ್ಯಂಗಾರರು ಮುಖ್ಯೋಪಾಧ್ಯಾಯರಾಗಿದ್ದರು. ಶ್ರೀ ನಾಥಮುನಿ ನಾಯಿಡು ಮತ್ತು ಕೃಷ್ಣಗಿರಿ ರಾಘವೇಂದ್ರರಾಯರು ಉಪಾಧ್ಯಾಯರುಗಳಾಗಿದ್ದರು. ಇವರು ವಿಶೂವಿನಲ್ಲಿನ ಕಲಿಯಬೇಕೆಂಬ ಆಸೆ, ಚುರುಕು ಬುದ್ಧಿಗಳನ್ನು ಗಮನಿಸಿದ್ದರು. ಹೇಳಿಕೊಟ್ಟ ಪಾಠಗಳನ್ನು ಬೇಗ ಗ್ರಹಿಸುತ್ತಿದ್ದ ವಿಶೂವಿನಲ್ಲಿ ಅವರಿಗೆ ತುಂಬಾ ಅಭಿಮಾನವಿತ್ತು. ಮನೆಗೆ ಕರೆದುಕೊಂಡು ಹೋಗಿ ಹೆಚ್ಚು ವಿಷಯಗಳನ್ನು ಹೇಳಿಕೊಡುತ್ತಿದ್ದರು.

ಮಾಧ್ಯಮಿಕ ಓದು ಮುಗಿಸಿ, ವಿಶು ೧೮೭೨ ರಲ್ಲಿ ಲೋವರ್ ಸೆಕೆಂಡರಿಪರೀಕ್ಷೆ ಪಾಸ್ ಮಾಡಿದ. ಪ್ರೌಢಶಾಲೆಯ ಎರಡು ತರಗತಿಗಳ ವಿದ್ಯಾಭ್ಯಾಸ ಮುಗಿಯಿತು. (ಇಷ್ಟುಹೊತ್ತಿಗೆ ವಿಶೂಗೆ ಮದುವೆ ಯಾಗಿತ್ತು. ಆಗ ಬಾಲ್ಯ ವಿವಾಹ ರೂಢಿಯಲ್ಲಿತ್ತು.) ಆಗ ಅನೇಕ ಸಮಸ್ಯೆಗಳು ಕಾಣಿಸಿಕೊಂಡವು. ಯಾತ್ರೆ ಹೋಗಿದ್ದ ಶ್ರೀನಿವಾಸ ಶಾಸ್ತ್ರಿಗಳು ಹಿಂದಿರುಗಿ ಬರುವಾಗ ರಾಯಚೂರಿನಲ್ಲಿ ಮರಣ ಹೊಂದಿದ್ದರು. ಸಂಸಾರದ ಪೂರ್ಣ ಜವಾಬ್ದಾರಿ ವಿಶೂವಿನ ಮೇಲೆ ಬಿತ್ತು. ಇದರೊಂದಿಗೆ ತನ್ನ ವಿದ್ಯಾಭ್ಯಾಸನನ್ನೂ ಮುಂದುವರಿಸಬೇಕಿತ್ತು. ಮುಂದಿನದೇ ಮೆಟ್ರಿಕ್ಯುಲೇಷನ್ ತರಗತಿ. ಅದಕ್ಕೆ ಬೆಂಗಳೂರಿಗೇ ಹೋಗಬೇಕಾಗಿತ್ತು. ಮನೆಯಲ್ಲಿ ತಂಗಿ ತಮ್ಮಂದಿರು. ವಿಶೂ ಧೈರ್ಯಶಾಲಿ. ವಿದ್ಯೆ ಕಲಿಯುವಿಕೆಯಲ್ಲಿನ ಆಸಕ್ತಿಯನ್ನು ದೂರ ಮಾಡಲಾರ. ಇವೆರಡನ್ನೂ ನಿರ್ವಹಿಸುವ ಪಣತೊಟ್ಟ.

ಆಗಾಗ ಮನೆಗೆ ಬಂದು ಹೋಗುತ್ತಿದ್ದ ಸೋದರ ಮಾವಂದಿರಾದ ಹೆಚ್. ರಾಮಯ್ಯನವರಿಗೆ ವಿಶೂವಿನಲ್ಲಿ ಅಪಾರ ಪ್ರೇಮ. ಚಿಕ್ಕಬಳ್ಳಾಪುರದಲ್ಲಿನ ಕಲಿಯುವಿಕೆ ಮುಗಿಯಿತೆಂದು ಅವರಿಗೆ ತಿಳಿಯಿತು. ಕೂಡಲೆ ಅವರು ಧಾವಿಸಿ ಬಂದರು. ವಿಶೂ ಅವರಿಗೆ ತನ್ನ ಯೋಜನೆಯನ್ನು ತಿಳಿಸಿದ. ತಾವು ಅದಕ್ಕೆ ಸಹಾಯ ಮಾಡುವುದಾಗಿಯೂ, ತಮ್ಮ ಮನೆಯಲ್ಲಿಯೇ ಇರಬೇಕೆಂದು ತಿಳಿಸಿ, ವಿದ್ಯಾಭ್ಯಾಸವನ್ನು ಮುಂದುವರಿಸುವಂತೆ ಹೇಳಿದರು. ಅವರೂ ಸಾಕಷ್ಟು ಬಡತನದಲ್ಲಿದ್ದರು.

ವಿಶೂಗೆ ಇದನ್ನು ಕೇಳಿ ಬಹಳ ಸಂತೋಷವಾಯಿತು. ತನ್ನ ಮನದಾಸೆ ಈ ರೀತಿ ನೆರವೇರಿದುವಕ್ಕಾಗಿ ಸೋದರಮಾವನವರನ್ನು ಅಭಿನಂದಿಸಿದ. ತಾನು ವಾರಾನ್ನ ಮಾಡಿಕೊಳ್ಳುವುದಾಗಿಯೂ,

ಯಾರಿಗಾದರೂ ಪಾಠ ಹೇಳಿ, ಫೀಜಿಗಾಗಿ ಹಣ ಸಂಪಾದಿಸಿಕೊಳ್ಳುವುದಾಗಿಯೂ, ಅದರಲ್ಲಿ ಸ್ವಲ್ಪ ಹಣವನ್ನು ತಾಯಿಗೆ ಕಳುಹಿಸುವುದಾಗಿಯೂ ತಿಳಿಸಿದ. ಇತರರಿಗೆ ಭಾರವಾಗಿರಬಾರದೆಂಬುದು ವಿಶೂನ ಅಭಿಪ್ರಾಯ. ಇದನ್ನು ಕೇಳಿ ರಾಮಯ್ಯನವರು ಆನಂದ ಪಟ್ಟರು. ತಮ್ಮ ಸೋದರಳಿಯನ ಆತ್ಮಾಭಿಮಾನದ ಬಗೆಗೆ ಅವರಿಗೂ ಅಭಿಮಾನವಿತ್ತು. ಆದುದರಿಂದ ಅದಕ್ಕೆ ಒಪ್ಪಿಕೊಂಡರು. ತಾಯಿ ವೆಂಕಚ್ಚಮ್ಮನವರೂ ಅದಕ್ಕೆ ಒಪ್ಪಿಗೆ ಕೊಟ್ಟರು.

## ೨

ವಿಶೂ ತಾನು ತಿಳಿಸಿದಂತೆ ನಡೆದುಕೊಂಡ. ಬೆಂಗಳೂರಿಗೆ ಬಂದು ಸೆಂಟ್ರೆಲ್ ಕಾಲೇಜ್ ಸೇರಿದ. ವಾರಾನ್ನದ ಮನೆಗಳು ದೊರೆತವು. ಮನೆಯ ಪಾಠಗಳೂ ದೊರೆತವು. ಕೋಟೆಯಲ್ಲಿನ ಒಬ್ಬ ಕೊಡಗಿನವರ ಮನೆಯಲ್ಲಿ ಪಾಠ ಹೇಳುತ್ತಿದ್ದ. ರಾತ್ರಿ ಅವರ ಮನೆಯಲ್ಲಿ ಮಲಗಿ, ಬೆಳಗಿನ ಜಾವ ಬೇಗನೆದ್ದು, ಮಕ್ಕಳನ್ನು ಎಬ್ಬಿಸಿ, ಪಾಠ ಹೇಳಿ, ಅಲ್ಲಿಂದ ಸೋದರಮಾವನ ಮನೆಗೆ ಬಂದು, ಸ್ನಾನ ಸಂಧ್ಯಾವಂದನೆಗಳನ್ನು ಮುಗಿಸಿ, ಕಾಲೇಜಿಗೆ ಹೋಗುತ್ತಿದ್ದ. ಈ ನಿಯಮ, ನಿಷ್ಠಾವಂತ ಜೀವನ ಮುಂದೆ ಆತನನ್ನು ನಿಷ್ಠಾವಂತ, ಕಾರ್ಯಯೋಗಿ ಮಾನವನನ್ನಾಗಿ ಮಾಡಿತು.


ವಿಶೂ ಕಾಲೇಜಿನಲ್ಲಿ ಉತ್ತಮ ವಿದ್ಯಾರ್ಥಿಯಾಗಿ ಹೆಚ್ಚಿನ ಅಂಕಗಳನ್ನು ಗಳಿಸಿದುದರಿಂದ ಸ್ಕಾಲರ್‌ಷಿಪ್ ಕೂಡ ಸಿಕ್ಕಿತು. ತನ್ನ ಬಟ್ಟೆ, ಪುಸ್ತಕ, ಮಸಿಗಳಿಗೆ ಸ್ವಲ್ಪಹಣ ಖರ್ಚುಮಾಡಿಕೊಂಡು, ಉಳಿದದ್ದು ತಾಯಿಯ ಸಂಸಾರದ ಖರ್ಚಿಗಾಗಿ ಕಳುಹಿಸುತ್ತಿದ್ದ.

### ೧೮೭೫ ರಲ್ಲಿ ಒಂದು ದಿನ—

ಮಾರನೆಯ ದಿನ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಹಣ ಕಟ್ಟಬೇಕು. ವಿಶೂವಿನ ಬಳಿ ಒಂದು ಕುರುಡು ಕಾಸೂ ಇಲ್ಲ. ಸೋದರ ಮಾವನನ್ನು ಹಣ ಕೇಳಲು ಸಂಕೋಚ. ಪಾಠದ ಮನೆಯಲ್ಲಿ ಸಾಲ

ಕೇಳಲು ಇಷ್ಟವಿಲ್ಲ. ಪಾಠದ ಮನೆಯಿಂದ ಬಂದ ಹಣವನ್ನು ಸ್ಕಾಲರ್ ಷಿಪ್ ಹಣದೊಂದಿಗೆ ಸೇರಿಸಿ, ತಾಯಿಗೆ ಕಳುಹಿಸಿದ್ದ. ಅದನ್ನು ಆಕೆ ಹಾಗೆಯೆ ಇಟ್ಟಿರುತ್ತಾಳೆ, ಖರ್ಚು ಮಾಡಿರುವುದಿಲ್ಲ ಎಂಬ ನಂಬಿಕೆ. ಹಾಗಿದ್ದರೆ ಚಿಕ್ಕಬಳ್ಳಾಪುರದಲ್ಲಿದ್ದ ತಾಯಿಯನ್ನು ಅಂದೇ ಕಂಡು, ಹಣವನ್ನು ಏಕೆ ತರಬಾರದು ಎಂದು ವಿಶೂ ಯೋಚಿಸಿದ.

ಆಗ ಸಾಯಂಕಾಲವಾಗಿತ್ತು. ಬೆಂಗಳೂರಿನಿಂದ ಚಿಕ್ಕಬಳ್ಳಾಪುರಕ್ಕೆ ಹೋಗಲು ಆ ಸಮಯದಲ್ಲಿ ಯಾವ ವಾಹನ ಸೌಕರ್ಯವೂ ಇರಲಿಲ್ಲ. ಬಸ್ಸು, ರೈಲು ಆಗಿನ್ನೂ ಬಂದಿರಲಿಲ್ಲ. ಅಂಚೆ-ಕೋಚು ಗಾಡಿಯಲ್ಲಿ ಹೋಗಬಹುದಾಗಿತ್ತು. ಆದರೆ ಅಂಥಹ ಸಾಯಂಕಾಲದ ಸಮಯದಲ್ಲಿ ಆ ವಾಹನವೂ ಹೋಗುತ್ತಿರಲಿಲ್ಲ. ಅದಕ್ಕೆ ಕೊಡುವಷ್ಟು ಹಣವೂ ಅವನ ಬಳಿ ಇಲ್ಲ. ತನ್ನೆಲ್ಲ ಹಿರಿಯರೂ ನಡೆದುಕೊಂಡೇ ಊರಿನಿಂದ ಊರಿಗೆ ಹೋಗುತ್ತಿದ್ದುದನ್ನು ನೆನೆಸಿಕೊಂಡ. ಹಾಗಿದ್ದರೆ ತಾನೂ ಅದೇ ರೀತಿ ರಾತ್ರಿಯೆಲ್ಲ ನಡೆದು ಚಿಕ್ಕಬಳ್ಳಾಪುರವನ್ನು ಸೇರಿ, ಅಮ್ಮನಿಂದ ಹಣ ಪಡೆದು, ಬೆಳಿಗ್ಗೆ ಕಾಲೇಜು ಸಮಯಕ್ಕೆ ಏಕೆ ಹಿಂದಿರುಗಬಾರದು - ಎಂದುಕೊಂಡ. ಹಾಗೆಯೇ ಮಾಡುವುದೆಂದು ತೀರ್ಮಾನಿಸಿದ. ಆತನಿಗೆ ಅದೇ ಸರಿಯಾದ ಮಾರ್ಗವಾಗಿ ಕಂಡಿತು. ವಿದ್ಯೆ ಕಲಿಯುವುದನ್ನು ಬಿಡಲು ಇಷ್ಟವಿಲ್ಲದ ಈ ಬಾಲಕನಿಗೆ ರಾತ್ರಿ ನಡೆದು ಹೋಗುವ ಭಯಾನಕ ಕೆಲಸ ತುಂಬಾ ಸುಲಭವಾಗಿ ಕಂಡಿತು.



೪

ಹೀಗೆ ತೀರ್ಮಾನಿಸಿದ್ದೆ ತಡ, ಅದನ್ನು ಕಾರ್ಯರೂಪಕ್ಕೆ ತರಲು ಅಲ್ಲಿಂದೆದ್ದು ಹೊರಟ. ಮಲ್ಲೇಶ್ವರದ ಕಾಡು ಸಂಪಿಗೆ ದೇವಾಲಯವನ್ನು ದಾಟಿದ. ಯಶವಂತಪುರದ ಸಂತೇಸಾಲನ್ನು ದಾಟಿ ಮುಂ ನಡೆದ. ಯಲಹಂಕದ ಹಾಳುಬಿದ್ದ ಕೋಟೆ, ನಗರಗಳನ್ನು ಹಿಂದೆ ಬಿಟ್ಟ ದೇವನಹಳ್ಳಿಯ ಕಡೆ ಹೊರಟ.



ರಸ್ತೆಯ ಎರಡೂ ಕಡೆಗಳಲ್ಲಿ ಆಕಾಶ ಮುಟ್ಟುವಂತಿರುವ ಸಾಲು ಮರಗಳಿದ್ದವು. ಅದರ ಹಿಂದೆಯೆ ಬೆನ್ನಿನಲ್ಲಿ ಎರಡೂ ಕಡೆ ದಟ್ಟವಾದ ಆರಣ್ಯವಿತ್ತು. ಕಗ್ಗತ್ತಲು ಎಲ್ಲೆಲ್ಲೂ ತಾನೇ ತಾನಾಗಿತ್ತು. ಹುಳು ಹುಪ್ಪಟೆಗಳ ಜೀರ್ ಜೀರ್ ಧ್ವನಿಗಳು ಆ ನಿಶ್ಶಬ್ದ ರಾತ್ರಿಯಲ್ಲಿ ವಿಚಿತ್ರ ಧ್ವನಿಗಳನ್ನು ಉಂಟುಮಾಡುತ್ತಿದ್ದವು. ಆಗಾಗ ನೆಲದಿಂದ ಮೇಲೆದ್ದ ನೊರಜು ಕಲ್ಲುಗಳನ್ನು ಎಡವುತ್ತಿದ್ದ. ಹಾವೋ, ಕಾಡುಬೆಕ್ಕೋ, ಚಿರತೆಯೋ, ನರಿಯೋ ದಾರಿಗೆ ಅಡ್ಡಲಾಗಿ ಬರುತ್ತಿತ್ತು. ಅವು ಅಲ್ಲಿಂದ ಹೋಗುವವರೆಗೂ ನಂದೀಶ್ವರನನ್ನು ನೆನೆಯುತ್ತಾ ಸುಮ್ಮನೆ ನಿಂತು ಅನಂತರ ಮುಂದಡಿ ಇಡುತ್ತಿದ್ದ. ಆಗಾಗ ಕಾಡು ಪ್ರಾಣಿಗಳ ಗರ್ಜನೆ ಕೇಳಿಬರುತ್ತಿತ್ತು. ಅದು ಎದೆ ನಡುಗಿಸುವಂತಿತ್ತು. ಆದರೂ ಎದೆಯನ್ನು ಕಲ್ಲುಮಾಡಿಕೊಂಡು ಮುಂದೆ ಹೆಜ್ಜೆ ಇರಿಸುತ್ತಿದ್ದ.

ಆಕಾಶದ ತುಂಬಾ ಮೋಡಗಳು ತುಂಬಿದ್ದವು. ಆಗಾಗ ಮಳೆಯ ಹನಿಗಳು ಬೀಳುತ್ತಿದ್ದುವು. ಕಾಡು ಹುಳಗಳು ಆತನ ಮುಖಕ್ಕೆ ರಪ್, ರಪ್ ಎಂದು ಅಪ್ಪಳಿಸುತ್ತಿದ್ದುವು. ದೂರದಲ್ಲಿ ಕಲ್ಲುಗುಡ್ಡಗಳ ಮೇಲೆ ಕಳ್ಳರ ಠಾಣ್ಯಗಳಿಂದ ಪಂಜಿನ ಬೆಳಕು ಕಾಣಿಸುತ್ತಿತ್ತು. ವಿಶೂ ಇವನ್ನೆಲ್ಲ ಕಂಡರೂ ಭಯಪಡದೆ ಶಾಲೆಯ ಪಾಠಗಳನ್ನು ಮನಸ್ಸಿನಲ್ಲಿ ಹೇಳಿಕೊಳ್ಳುತ್ತಾ, ಮುಂದಡಿ ಇಡುತ್ತ ದೇವನಹಳ್ಳಿ ಸೇರಿದ.

ಕಾಲು ಮರಗಟ್ಟಿದಂತಿತ್ತು. ಮಧ್ಯರಾತ್ರಿ ಮೀರಿತ್ತು. ನಿಶ್ಶಕ್ತಿ ತಲೆದೋರಿತ್ತು. ಆದರೂ ವಿಶೂ ಧೈರ್ಯಗೆಡಲಿಲ್ಲ. ನಂದಿ ಬೆಟ್ಟದ ಪಕ್ಕದ ರಸ್ತೆಯಲ್ಲಿ ಮುಂದೆ ಮುಂದೆ ಹೆಜ್ಜೆ ಹಾಕತೊಡಗಿದ.

ದೂರದಲ್ಲಿ ಚಿಕ್ಕಬಳ್ಳಾಪುರ ಮಸುಕಾಗಿ ಕಾಣಿಸಿತು. ಊರ ದೀಪಗಳು ಮಿಣುಕು ಹುಳುಗಳಂತೆ ಕಂಡವು. ಅಲ್ಲಿರುವ ತನ್ನ ತಾಯಿ,

ತಮ್ಮಂದಿರನ್ನು ಕಾಣುವ ಉತ್ಸಾಹ ಸುಳಿದ ಕೂಡಲೆ, ವಿಶೂ ವಿನಮನ ಪುಲಕಿತವಾಗಿ, ಹಕ್ಕಿಯಂತೆ ಹಗುರವಾಯಿತು.

ಕಂದವರದ ಬಾಗಿಲನ್ನು ದಾಟಿ, ಪೇಟೆಗೆ ಬಂದು ಮನೆಯನ್ನು ತಲುಪಿದ. ಬಾಗಿಲು ತಟ್ಟಿ 'ಅಮ್ಮಾ' ಎಂದು ಕೂಗಿದ. ಅಂಥ ಕತ್ತಲ ರಾತ್ರಿಯಲ್ಲಿ ತಮ್ಮ ಮಗನ ಧ್ವನಿಯನ್ನು ಕೇಳಿ ವೆಂಕಚ್ಚಮ್ಮನವರು ಆಶ್ಚರ್ಯಗೊಂಡು ಬಾಗಿಲು ತೆಗೆದರು. ತಾಯಿಯನ್ನು ಕಂಡು ವಿಶೂ ಆನಂದಿತನಾದ. ಅದುವರೆಗಿನ ಆತನ ಆಯಾಸ, ದಣಿವು ಹಾರಿ ಹೋಗಿದ್ದವು. ನಡೆದು ಬಂದುದನ್ನು ಕೇಳಿ, ತಾಯಿಯ ಕಂಗಳು ಹನಿಗೂಡಿದವು.

ಬಂದುದೇಕೆಂದು ತಾಯಿ ಕೇಳಿದರು. ವಿಷಯವನ್ನು ತಿಳಿಸಿ, 'ಪರೀಕ್ಷೆಗೆ ಹಣ ಕಟ್ಟಬೇಕು, ಹಣ ಕೊಡಮ್ಮ' ಎಂದು ವಿಶೂ ಕೇಳಿದ. ತಾಯಿಯು ವಿಚಾರ ಕೇಳಿ ಗಾಬರಿಗೊಂಡರು. ವಿಶೂ ಕಳುಹಿಸಿದ ಹಣವನ್ನು ಆಕೆ ಮನೆ ಖರ್ಚಿಗೆ ಉಪಯೋಗಿಸಿಕೊಂಡಿದ್ದರು. ಇರುವ ವಿಚಾರ ತಿಳಿದು ವಿಶೂ ಗಾಬರಿಗೊಂಡ; ಇದಕ್ಕಾಗಿ ಇಷ್ಟು ದೂರ ನಡೆದು ಬಂದು, ನಿರಾಶೆ ಆಯಿತಲ್ಲ ಮುಂದೇನು ಗತಿ ?-ಎಂದು. ಹಣವನ್ನು ಹೊಂದಿಸುವುದು ಹೇಗೆ - ಎಂಬುದೇ ಅವರ ಸಮಸ್ಯೆಯಾಯಿತು. ಅಂಥಹ ಅರ್ಧ ರಾತ್ರಿಯ ಸಮಯದಲ್ಲಿ ಹಣ ಪಡೆಯುವ ದಾರಿ ಕಾಣದೆ, ತಮ್ಮ ಅಸಹಾಯ ಪರಿಸ್ಥಿತಿಗಾಗಿ ದುಃಖಪಟ್ಟರು.

ಅಷ್ಟರಲ್ಲಿ ಅಕ್ಕಪಕ್ಕದ ಮನೆಯವರು ಎಚ್ಚರಗೊಂಡರು. ಎದುರು ಮನೆ ನರಸಿಂಹಭಟ್ಟರು, ಪಕ್ಕದ ಮನೆ ಶೆಟ್ಟರು ಬಂದರು. ವಿಶೂ ಬೆಂಗಳೂರಿನಿಂದ ಅಂಥ ಕತ್ತಲ ರಾತ್ರಿಯಲ್ಲಿ ನಡೆದು ಬಂದುದನ್ನು ಕೇಳಿ ಅವರುಗಳು ಆಶ್ಚರ್ಯಪಟ್ಟರು. ಆ ಮನೆಯ ಅಂದಿನ ಪರಿಸ್ಥಿತಿ

ಯನ್ನು ಅವರುಗಳು ಅರ್ಥಮಾಡಿಕೊಂಡಿದ್ದರು. ಶೆಟ್ಟರಿಗಂತೂ ವಿಚಾರ ತಿಳಿದು ತುಂಬಾ ಆಶ್ಚರ್ಯವಾಗಿತ್ತು. ವಿಶೂ ಪರೀಕ್ಷೆಗೆ ಕಟ್ಟಬೇಕಾಗಿರುವ ಹಣವನ್ನು ತಾವು ಕೊಡುವುದಾಗಿ ಅವರು ತಿಳಿಸಿದರು. ಅಂತೆಯೆ ಮನೆಯಿಂದ ಹದಿನೈದು ಬೆಳ್ಳಿ ರಾಣಿ ರೂಪಾಯಿಗಳನ್ನು ತಂದು ಕೊಟ್ಟರು. ಎಲ್ಲರಿಗೂ ಸಂತೋಷವಾಯಿತು.

ಇಷ್ಟು ಹೊತ್ತಿಗೆ ಬೆಳಗಿನಜಾವ ಆಗುವುದರಲ್ಲಿತ್ತು. ವಿಶೂ ಸ್ನಾನ, ಸಂಧ್ಯಾವಂದನೆಗಳನ್ನು ಮಾಡಿ, ತಾಯಿ ಮಾಡಿಕೊಟ್ಟ ತಿಂಡಿಯನ್ನು ತಿಂದು, ತಾಯಿಯ ಪಾದಗಳಿಗೆ ಪ್ರಣಾಮ ಮಾಡಿ, ಬೆಂಗಳೂರಿಗೆ ಕಾಲು ನಡಿಗೆಯಲ್ಲಿ ಹೊರಟ. ತುಂಬಾ ಆಯಾಸಗೊಂಡಿದ್ದ. ಕಾಲಿನ ಅಡಿಯ ಭಾಗ ಗಂಟಾಗಿ ನೋಯುತ್ತಿತ್ತು. ಆದರೂ ಸಮಯಕ್ಕೆ ಸರಿಯಾಗಿ ಕಾಲೇಜು ಸೇರಲೇಬೇಕಾಗಿತ್ತು. ದೇವನಹಳ್ಳಿ ಬಳಿ ಎತ್ತಿನ ಗಾಡಿಯೊಂದು ಸಿಕ್ಕಿತು. ಅದರಲ್ಲಿ ಕುಳಿತು ಯಲಹಂಕ ತಲುಪಿದ. ಅಲ್ಲಿಂದ ನಡೆದು ಬೆಂಗಳೂರು ತಲುಪಿದ. ಕಾಲೇಜು ಬಳಿಗೆ ಬರುವಷ್ಟು ಹೊತ್ತಿಗೆ ೧೨ ಗಂಟೆ ಆಗಿತ್ತು. ಕಾಲೇಜಿನ ಗುಮಾಸ್ತ ಹಣ ಕಾಸಿನ ವ್ಯವಹಾರ ಪೂರ್ತಿಗೊಳಿಸಿದ್ದ. ಕೂಡಲೆ ಪ್ರಿನ್ಸಿಪಾಲ್ ಛಾರಲ್ಸ್ ವಾಟರ್ಸ್‌ರವರ ಬಳಿಗೆ ವಿಶೂ ಹೋದ. ಆತನ ಮುಖ ದುಃಖದಿಂದ ಕೂಡಿತ್ತು. ಪ್ರಿನ್ಸಿಪಾಲರಿಗೆ ವಿಶೂ ಅಚ್ಚುಮೆಚ್ಚಿನ ಶಿಷ್ಯನಾಗಿದ್ದ. ಆದರಿಂದ ಅನುಕಂಪ ತೋರಿ, ಪರೀಕ್ಷೆಯ ಹಣವನ್ನು ತೆಗೆದುಕೊಳ್ಳುವಂತೆ ಗುಮಾಸ್ತನಿಗೆ ತಿಳಿಸಿದರು. ಅಂತೆಯೆ ಗುಮಾಸ್ತ ಹಣವನ್ನು ಪಡೆದ. ವಿಶೂ ಪ್ರಿನ್ಸ್‌ಪಾಲರಿಗೆ ಅಭಿನಂವನೆಗಳನ್ನು ಅರ್ಪಿಸಿದ. ಒಂದು ದಿನದಲ್ಲಿ ಎಪ್ಪತ್ತು ಮೈಲಿಗಳನ್ನು ನಡೆದುದನ್ನು ಕೇಳಿ ಪ್ರಿನ್ಸಿಪಾಲರು, ಮತ್ತಿತರರು ಆಶ್ಚರ್ಯಗೊಂಡರು. ಪ್ರಿನ್ಸಿಪಾಲರಂತೂ ಈ ಸಾಹಸಿಯನ್ನು ಮಿತ್ರನಿಗಿಂತಲೂ ಹೆಚ್ಚಾಗಿ ನೋಡಿಕೊಳ್ಳತೊಡಗಿದರು.

## ೫

ವಿಶೂ ಕಷ್ಟಪಟ್ಟು ಅಧ್ಯಯನ ಮಾಡಿದ. ನಿರೀಕ್ಷಿಸಿದಂತೆ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಮೊದಲ ದರ್ಜೆಯಲ್ಲಿ ಉತ್ತೀರ್ಣನಾದ. ಅನಂತರ ಎಫ್. ಎ. ಪರೀಕ್ಷೆಯನ್ನೂ ಪಾಸ್‌ಮಾಡಿದ. ಬಿ. ಎ. ಪರೀಕ್ಷೆಗಾಗಿ ಚೆನ್ನಾಗಿ ಓದ ತೊಡಗಿದ. ಎಂದಿನಂತೆ ಮನೆ ಪಾಠಗಳಲ್ಲೂ ಆಸಕ್ತಿ ವಹಿಸಿದ. ಆಗ ಮಂತ್ರಿಗಳಾಗಿದ್ದ ಮಾದಯ್ಯ ಎಂಬುವರ ತಮ್ಮ ಮತ್ತು ಮಕ್ಕಳಿಗೆ ಪಾಠ ಹೇಳುತ್ತಿದ್ದ. ಮನೆಯಲ್ಲಿ ದೀಪವಿಲ್ಲದಾಗ, ಬೀದಿ ದೀಪದ ಬೆಳಕಿನಲ್ಲಿ ರಾತ್ರಿಯೆಲ್ಲ ಓದುತ್ತಿದ್ದ. ಇದನ್ನು ಕಂಡ ಒಬ್ಬ ಮಹನೀಯರು ಈತನನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ ಅನುಕೂಲ ಮಾಡಿಕೊಟ್ಟರು.

೧೮೮೦ ರಲ್ಲಿ ಬಿ. ಎ. ಪರೀಕ್ಷೆಯಲ್ಲಿ ವಿಶೂ ಮೊದಲನೆಯ ದರ್ಜೆಯಲ್ಲಿ ಉತ್ತೀರ್ಣನಾದ. ಮುಂದೇನು ಮಾಡುವುದು? ಮುಂದೆ ಓದಲು ಹಣಬೇಕು, ಸಂಸಾರದ ಪಥ ಸಾಗಬೇಕು. ಓದುವುದನ್ನು ಬಿಡಲು ಇಷ್ಟವಿಲ್ಲ. ಕಲಿಯುವುದು ತುಂಬಾ ಇದೆ. ಗುರುಗಳಾದ ವಾಟರ್ಸ್‌ರವರ ಎದುರಿಗೆ ತನ್ನ ಸಮಸ್ಯೆಯನ್ನು ವಿಶೂ ಇರಿಸಿದ. ಅವರು ಸುಲಭವಾಗಿ ಇದನ್ನು ಬಿಡಿಸಿದರು. ಗಣಿತ ಹಾಗೂ ವಿಜ್ಞಾನಗಳಲ್ಲಿ ವಿಶೂ ಬುದ್ಧಿವಂತನಾದುದರಿಂದ ಇಂಜನಿಯರಿಂಗ್ ಪರೀಕ್ಷೆಗೆ ಓದುವಂತೆ ಬೋಧಿಸಿದರು. ಕೂಡಲೆ ವಿಶೂಗೆ ಹೊಸೂರು ಪಾಟೆ ಹೇಳಿದ

ಮಾತು ನೆನಪಿಗೆ ಬಂದಿತು. ಆದರೆ ಈ ಓದಿಗೆ ಪೂನಾಕ್ಕೆ ಹೋಗಬೇಕು. ಅಲ್ಲಿ ಮೂರು, ನಾಲ್ಕು ವರ್ಷ ಇರಬೇಕು. ಆಗ ವಿಶೂ ಹಣದ ಸಮಸ್ಯೆಯನ್ನು ತಿಳಿಸಿದ. ವಾಟರ್ಸ್‌ರವರು ಅದಕ್ಕೂ ಒಂದು ದಾರಿ ತೋರಿಸಿದರು. ಆಗ ಮೈಸೂರು ರಾಜ್ಯಕ್ಕೆ ದಿವಾನ್ ರಂಗಾಚಾರ್ಲು ರವರು ದಿವಾನರಾಗಿದ್ದರು. " ಈತ ತುಂಬಾ ಬುದ್ಧಿವಂತ ಹುಡುಗ, ಮುಂದಿನ ವಿದ್ಯಾಭ್ಯಾಸಕ್ಕೆ ಸಹಾಯಮಾಡಿ " ಎಂದು ಪ್ರಾರ್ಥಿಸಿ ವಾಟರ್ಸ್ ಅವರು ದಿವಾನರಿಗೆ ಪತ್ರವೊಂದನ್ನು ಬರೆದುಕೊಟ್ಟು, ವಿಶೂವನ್ನು ದಿವಾನರ ಬಳಿ ಕಳುಹಿಸಿದರು.

ಪರಿಚಯ ಪತ್ರದ ಸಮೇತ ವಿಶೂ ದಿವಾನರನ್ನು ಅವರ ಮನೆ ಯಲ್ಲಿ ಕಂಡು ಅವರಲ್ಲಿ ತನ್ನ ವಿವರಗಳನ್ನೆಲ್ಲ ನಿವೇದಿಸಿದ. ವಿಶೂವಿನ ಮುಖದಲ್ಲಿನ ತೇಜಸ್ಸು, ಆತ್ಮವಿಶ್ವಾಸಗಳನ್ನು ಅವರು ಗುರುತಿಸಿ, ವಿಶ್ವಾಸದಿಂದ ಮಾತನಾಡಿಸಿ ವಿದ್ಯಾಭ್ಯಾಸ ಮುಂದುವರಿಸುವಂತೆ ಬೆನ್ನು ತಟ್ಟಿದರು. ಸರ್ಕಾರದ ಮುಖಾಂತರ ಸ್ಕಾಲರ್‌ಷಿಪ್ ಕೊಡಿಸುವು ದಾಗಿ ತಿಳಿಸಿದರು. ಅಂತೆಯೇ ಸರ್ಕಾರದಿಂದ ಕೂಡಲೇ ಸ್ಕಾಲರ್ ಷಿಪ್ ದೊರೆಯಿತು. ಹೊರನಾಡಿನ ಉನ್ನತಮಟ್ಟದ ವಿದ್ಯಾಭ್ಯಾಸ ಮಾಡುವವರಿಗೆ ಮೈಸೂರು ಸರ್ಕಾರ ಸ್ಕಾಲರ್‌ಷಿಪ್ ನೀಡುವ ವ್ಯವಸ್ಥೆ ಮಾಡಿದ್ದು ಇದೇ ಮೊದಲು. ಆದರೆ ಒಂದು ನಿಬಂಧನೆ ಇತ್ತು. 'ಎಂಥಹುದೇ ಸಮಯದಲ್ಲಿ ಮೈಸೂರಿನ ಸೇವೆ ಮಾಡುವ ಕರೆ ಬಂದರೂ, ಸಿದ್ಧರಿರಬೇಕು'-ಎಂಬುದಾಗಿತ್ತು. ವಿಶೂ ಇದಕ್ಕೆ ಒಪ್ಪಿದ. ತಾಯಿಯೂ ಇದಕ್ಕೆ ಒಪ್ಪಿಕೊಂಡರು.

# ೭

ವಿಶೂ ಪೂನಾದ ಇಂಜನಿಯರಿಂಗ್ ಕಾಲೇಜನ್ನು ಸೇರಿದ. ಕ್ರಮಬದ್ಧವಾದ ವ್ಯಾಸಂಗಕ್ರಮವನ್ನು ಹೊಂದಿದ್ದ. ಸ್ಕಾಲರ್‌ಷಿಪ್ ಹಣವನ್ನು ಎಚ್ಚರಿಕೆಯಿಂದ ಉಪಯೋಗಿಸಿಕೊಂಡು ತನ್ನ ಓದನ್ನು ಮುಂದುವರಿಸಿದ. ಹೊಸ ಸ್ಥಳವೆಂಬ ಭಯ ಆತನಿಗೆ ಇರಲಿಲ್ಲ. ಅನವಶ್ಯಕವಾಗಿ ಸಮಯವನ್ನು ಕಳೆಯುತ್ತಿರಲಿಲ್ಲ. ಯಾವಾಗಲೂ ಪಾಠಗಳನ್ನು ಓದುವುದು, ಸ್ನೇಹಿತರೊಂದಿಗೆ ಅವುಗಳ ಬಗೆಗೆ ಚರ್ಚಿಸು ವುದರಲ್ಲಿ ನಿರತನಾಗಿರುತ್ತಿದ್ದ.

ಆಗಾಗ್ಗೆ ತನ್ನ ಹಳ್ಳಿ, ತಾಯಿ, ತಮ್ಮಂದಿರು, ಸ್ನೇಹಿತರು, ಗುರುಗಳ ನೆನಪು ಬರುತ್ತಿತ್ತು. ಆಗ ಊರಿಗೆ ಬರಬೇಕೆಂದುಕೊಳ್ಳು ತ್ತಿದ್ದ. ಆದರೆ ಅದು ಅನವಶ್ಯಕವಾಗಿತ್ತು. ರಜಾದಲ್ಲಿ ಮಾತ್ರ ಚಿಕ್ಕ ಬಳ್ಳಾಪುರಕ್ಕೆ ಬಂದು ಹೋಗುತ್ತಿದ್ದ.

ಓದಿನಲ್ಲಿ ಪ್ರೊಫೆಸರುಗಳು ವಿಶೂಗೆ ಸಹಾಯಮಾಡಿದರು. ಇದ ರಿಂದ ಮೂರು ವರ್ಷದ ಓದು ಎರಡೂವರೆ ವರ್ಷದಲ್ಲೇ ಮುಗಿಯಿತು. ೧೮೮೩ ನವೆಂಬರ್‌ನಲ್ಲಿ ನಡೆದ ಫೈನಲ್ ಇಂಜನಿಯರಿಂಗ್ ಪರೀಕ್ಷೆ ಯಲ್ಲಿ ಕಾಲೇಜಿಗೇ ಮೊಟ್ಟಮೊದಲನೆಯವನಾಗಿ ಉತ್ತೀರ್ಣನಾದ.

ಹೀಗೆ ಉತ್ತೀರ್ಣರಾದವರಿಗೆ ಬೊಂಬಾಯಿ ಸರ್ಕಾರವು 'ಜೇಮ್ಸ್ ಬರ್ಕ್‌ಲಿ' ಬಹುಮಾನ ನೀಡಿ, ಇಂಜನಿಯರಿಂಗ್ ಉದ್ಯೋಗವೊಂದನ್ನು ನೀಡುತ್ತಿತ್ತು. ಇವೆರಡೂ ವಿಶೂಗೆ ಲಭಿಸಿದುವು. ವಿಶೂವು ವಿಶ್ವೇಶ್ವರಯ್ಯನವರಾದರು.

# ೭

೧೮೮೪ನೇ ಫೆಬ್ರವರಿಯಲ್ಲಿ ಬೊಂಬಾಯಿ ಸರ್ಕಾರದ ಲೋಕೋಪಯೋಗಿ ಶಾಖೆಯಲ್ಲಿ ವಿಶ್ವೇಶ್ವರಯ್ಯನವರು ಅಸಿಸ್ಟೆಂಟ್ ಎಂಜಿನಿಯರ್ ಆಗಿ ನೇಮಕವಾದರು. ಕೆಲವು ತಿಂಗಳುಗಳಾದ ಮೇಲೆ ಇವರ ಮೇಲಾಧಿಕಾರಿಗಳು ಇವರಿಗೊಂದು ಕೆಲಸವನ್ನು ವಹಿಸಿದರು. ಪಂಜ್ರಾ ನದಿಯ ನೀರನ್ನು ದತಾರ್ಕಿ ಎಂಬ ಊರಿಗೆ ಸುರಂಗದ ದ್ವಾರಾ ಪೈಪ್‌ಗಳ ಮುಖಾಂತರ ಸಾಗಿಸಬೇಕಾಗಿತ್ತು. ನದಿಯಂಗಳ ವನ್ನು ದಾಟ ಕೆಲಸ ಮಾಡಿಸಬೇಕಾಗಿತ್ತು.

ಕೆಲಸ ಪ್ರಾರಂಭವಾದ ಕೂಡಲೆ, ಮಳೆ ಬರಲು ಪ್ರಾರಂಭಿಸಿ, ನದಿಯಂಗಳದಲ್ಲಿ ಮರಳು, ನೀರು ತುಂಬಿತು. ಕೆಲಸ ತುಂಬಾ ನಿಧಾನ ಆಯಿತು. ಕೆಲಸವೂ ಬರಬರುತ್ತಾ ಆಗದಂತೆ ಆಯಿತು. ವಿಶ್ವೇಶ್ವರಯ್ಯನವರು ಸದ್ಯಕ್ಕೆ ಕೆಲಸವನ್ನು ನಿಲ್ಲಿಸಬಹುದೆಂದು ಮೇಲಾಧಿಕಾರಿಗಳಿಗೆ ಸೂಚಿಸಿದರು. 'ಇದು ತೃಪ್ತಿಕರವಲ್ಲದ, ಸರಿಯಿಲ್ಲದ ಕೆಲಸ ಹಿಂದಿರುಗಿ' ಎಂದರು ಅವರು. ಇದರಿಂದ ವಿಶ್ವೇಶ್ವರಯ್ಯನವರಿಗೆ ಅಪಮಾನವಾದಂತಾಯಿತು. ಅವರು ಪಟ್ಟು ಹಿಡಿದು 'ಈ ಕೆಲಸವನ್ನು ಪೂರ್ತಿ ಮಾಡದೆ ಹಿಂದಿರುಗೆನು' ಎಂದು ತಿಳಿಸಿ, ಹಗಲಿರುಳೆನ್ನದೆ, ನೂರಾರು ಕೂಲಿಗಳ ಸಹಾಯದಿಂದ ದುಡಿದು ಕೆಲಸ ಮುಗಿಸಿದರು.

ಒಮ್ಮೆ ನದಿ ದಾಟಿ ಕೆಲಸ ಮಾಡುವುದನ್ನು ನೋಡಲು ಹೋದಾಗ, ಪ್ರವಾಹ ಬಂದಿತು. ಎರಡು ದಿನಗಳು ಒಂದು ಗ್ರಾಮದಲ್ಲಿ ವಾಸ ಮಾಡಬೇಕಾಯಿತು. ಮೂರನೆಯ ದಿನವೂ ನಿಲ್ಲಲಿಲ್ಲ. ಆಗ ಭಿಲ್ಲರ ಸಹಾಯದಿಂದ ತೆಪ್ಪವೊಂದನ್ನು ಮಾಡಿ, ಅದರ ಸಹಾಯದಿಂದ ಪ್ರವಾಹವನ್ನು ಈಜಿ, ದಾಟಿಕೊಂಡು ಬಿಡಾರಕ್ಕೆ ಬಂದರು. ಭಿಲ್ಲರೂ ಕೂಡ ಪ್ರವಾಹವನ್ನು ದಾಟಲು ಹೆದರಿದ್ದರು. ವಿಶ್ವೇಶ್ವರಯ್ಯನವರು ನದೀ ದಾಟಿದ ರೀತಿಯನ್ನು ಕಂಡು ಆಶ್ಚರ್ಯಗೊಂಡರು.

ಮೊದಲು ಅಪಸ್ವರ ತೆಗೆದ ಆಂಗ್ಲ ಅಧಿಕಾರಿಯೇ ಈಗಿನ ಕೆಲಸದಿಂದ ಸಂತೋಷಗೊಂಡ. ಮುಂದೆ ಚೆನ್ನಾಗಿ ಕೆಲಸ ಮಾಡಲು ಪ್ರೋತ್ಸಾಹ ನೀಡಿದ. ಅವರ ಕರ್ತವ್ಯನಿಷ್ಠೆಗಳನ್ನು ಪ್ರಶಂಸಿಸಿದ. ಕಡಿಮೆ ಅನುಭವವಿದ್ದರೂ ಇಲಾಖೆಯ ಪರೀಕ್ಷೆಗಳಿಗೆ ಕುಳಿತುಕೊಳ್ಳುವಂತೆ ಪ್ರೋತ್ಸಾಹಿಸಿದ. ಇದರಿಂದ ಉತ್ತೇಜಿತರಾದ ವಿಶ್ವೇಶ್ವರಯ್ಯನವರು ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಮೊದಲ ದರ್ಜೆಯ ಎಂಜಿನಿಯರ್ ಪದವಿ ಪಡೆದರು.

## ೮

ಸಕ್ಕೂರಿಗೆ ಸಿಂಧೂನದಿಯ ನೀರನ್ನು ಒದಗಿಸುವ ಕಾರ್ಯ ಮುಗಿಸಬೇಕಾಗಿತ್ತು. ಇದನ್ನು ನೋಡಿಕೊಳ್ಳಬೇಕಾಗಿದ್ದ ಆಂಗ್ಲ ಅಧಿಕಾರಿ ತೀರಿಕೊಂಡಿದ್ದ. ವಿಶ್ವೇಶ್ವರಯ್ಯನವರು ಈ ಕೆಲಸಕ್ಕೆ ಸೂಕ್ತ ವ್ಯಕ್ತಿಗಳೆಂದು ನಂಬಿ, ರೈನಾಲ್ಡ್ ರವರು ಅವರ ಹೆಸರನ್ನು ಸೂಚಿಸಿದರು. ವಿಶ್ವೇಶ್ವರಯ್ಯನವರು ಕೆಲಸವನ್ನು ಸಂತೋಷದಿಂದ ಒಪ್ಪಿಕೊಂಡು, ಅಚ್ಚುಕಟ್ಟಾಗಿ ನಿರ್ವಹಿಸಿದರು.

ಸಿಂಧೂ ನದಿಯ ನೀರು ಬಗ್ಗಡ. ಆದುದರಿಂದ ನದಿಯ ದಡದಲ್ಲಿ ಭಾವಿಗಳನ್ನು ತೋಡಿಸಿದರು. ಅಲ್ಲಿಂದ ತಳದಲ್ಲಿ ಸಿಂಧೂ ನದಿಗೆ ಸುರಂಗ ಹೊಡೆಸಿದರು. ಇದರಿಂದ ಶೋಧಿಸದೆಯೆ ಹೇರಳವಾದ ಸಿಹಿ ನೀರು ಬಂದಿತು. ಭಾವಿಗಳಿಂದ ನೀರನ್ನು ಹತ್ತಿರದ ಗುಡ್ಡದ ಮೇಲಕ್ಕೆ ಪಂಪ್ ಮಾಡಿಸಿ, ಅಲ್ಲಿಂದ ಮುಂದಕ್ಕೆ ಸಕ್ಕೂರಿಗೆ ಒದಗಿಸಿದರು. ವರ್ಷಗಳು ಹಿಡಿಸಬಹುದು ಎಂದಿದ್ದ ಈ ಕೆಲಸ, ವಿಶ್ವೇಶ್ವರಯ್ಯನವರ ಶ್ರಮದಿಂದ ಒಂದೂವರೆ ವರ್ಷದಲ್ಲಿ ಮುಗಿಯಿತು.

ಅನಂತರ ಪೂನಾ ನಗರಕ್ಕೆ ನೀರಾವರಿ ಕೆಲಸಗಳ ಎಂಜಿನಿಯರ್ ಆಗಿ ಬಂದರು. ಅದರ ಸುತ್ತಮುತ್ತಲ ಪ್ರದೇಶವು ದೊಡ್ಡ ನೀರಾವರಿ ಕ್ಷೇತ್ರವಾಗಿತ್ತು. ನಾಲಾ ಬೇಸಾಯ ರೂಢಿಯಲ್ಲಿತ್ತು. ಆದರೆ ನಾಲೆಯ

ನೀರು ತುಂಬಾ ಪೋಲಾಗುತ್ತಿತ್ತು. ಇದನ್ನು ತಪ್ಪಿಸಲು ಇಂತಿಷ್ಟು ಜಮೀನಿಗೆ ಇಷ್ಟೇ ನೀರು ಬಿಡಬೇಕು ಎನ್ನುವ ಪಡಿತರ ಪದ್ಧತಿ ಜಾರಿಗೆ ತರಲಾಯಿತು. ಇದರಿಂದ ಅನೇಕ ರೈತರಿಗೆ ಅಸಮಾಧಾನವಾಯಿತು. ಪತ್ರಿಕೆಗಳಲ್ಲಿ ಟೀಕೆಗಳು ಬಂದವು. ಸರ್ಕಾರದವರೆಗೂ ದೂರು ಹೋಯಿತು. ಇದರ ವಿಚಾರಣೆ ನಡೆಸುವಂತೆ ವಿಶ್ವೇಶ್ವರಯ್ಯನವರನ್ನೇ ಸರ್ಕಾರ ನೇಮಿಸಿತು.

ಕೂಡಲೇ ಬೇಸಾಯಗಾರರು, ಜಮೀನ್ದಾರರು, ನಾಲಾ ಅಧಿಕಾರಿಗಳ ಸಮ್ಮೇಳನವನ್ನು ಕರೆಯಲಾಯಿತು. ರೈತರು ಕೇಳಿದ ಪ್ರಶ್ನೆಗಳಿಗೆಲ್ಲ ನಾಲಾ ಅಧಿಕಾರಿಗಳು ಉತ್ತರ ನೀಡಿದರು. ಎಂಥಹ ಜಮೀನಿಗೆ, ಯಾವಬೆಳೆಗೆ ಎಷ್ಟು ನೀರುಬೇಕು ಎಂಬುದನ್ನು ವಿವರಿಸಿ, ಇನ್ನು ಮೇಲೆ ನಾಲೆಯ ನೀರನ್ನು ಹಂಚುವ ಕೆಲಸವನ್ನು ರೈತರೇ ವಹಿಸಿಕೊಳ್ಳಲಿ ಎಂದು ವಿಶ್ವೇಶ್ವರಯ್ಯನವರು ತಿಳಿಸಿದರು. ರೈತರು ಯಾರೂ ಮುಂದೆ ಬರಲಿಲ್ಲ. ಈ ನೇರಮಾರ್ಗ ತುಂಬಾ ಪರಿಣಾಮ ಬೀರಿತು. ವಿಶ್ವೇಶ್ವರಯ್ಯನವರ ನೀರಿನ ವ್ಯವಸ್ಥೆಯನ್ನು ರೈತರು ಅರಿತು, ಒಪ್ಪಿಕೊಂಡರು. ಮುಂದೆ ಈ ಸಮಸ್ಯೆಯೇ ಹುಟ್ಟಲಿಲ್ಲ.

ಇದೇ ರೀತಿಯಲ್ಲಿ ನೀರಾವರಿ ವಿಭಾಗ ಪದ್ಧತಿಯನ್ನು ಜಾರಿಗೆ ತಂದರು. ಅನೇಕ ಜಿಲ್ಲಾಧಿಕಾರಿಗಳು ಅಸಹಕಾರ ತೋರಿದರು. ವಿಶ್ವೇಶ್ವರಯ್ಯನವರು ಕೂಡಲೆ ಸರ್ಕಾರಕ್ಕೆ ಈ ವಿಚಾರವನ್ನು ತಿಳಿಸಿ, ಈ ಅಡಚಣೆಗಳನ್ನು ನಿವಾರಿಸಿ, ಇಲ್ಲವೆ ತನ್ನನ್ನು ನಿವೃತ್ತಿಮಾಡಿ ಎಂದು ಕೇಳಿಕೊಂಡರು. ಸರ್ಕಾರವು ಇವರ ತತ್ವವನ್ನು ಅರ್ಥಮಾಡಿಕೊಂಡಿತು. ವಿಶ್ವೇಶ್ವರಯ್ಯನವರಿಗೆ ಸಂಪೂರ್ಣ ಸಹಕಾರ ನೀಡುವಂತೆ ಎಲ್ಲ ಅಧಿಕಾರಿಗಳಿಗೂ ಆದೇಶ ನೀಡಿತು. ಮುಂದೆ ಅವರ ಕೆಲಸ ಸುಸೂತ್ರವಾಗಿ ನಡೆಯಿತು.

# ೬

ಪೂನಾ ನಗರಕ್ಕೆ ಖಡಕ್‌ವಾಸಲಾ ಬಳಿಯ ಒಂದು ಕೃತಕ ಸರೋವರದಿಂದ ನೀರು ಒದಗುತ್ತಿತ್ತು. ಪೂನಾನಗರ ಬೆಳೆಯತೊಡಗಿತು. ಇದರಿಂದ ಸರೋವರದ ನೀರು ಸಾಕಾಗುತ್ತಿರಲಿಲ್ಲ. ಮಳೆಗಾಲದಲ್ಲಿ ಹೆಚ್ಚುವರಿ ನೀರು ಬರುತ್ತಿತ್ತು. ಅದು ಕೋಡಿಯ ಮೇಲೆ ಏಳೆಂಟು ಅಡಿಗಳಷ್ಟು ವ್ಯರ್ಥವಾಗಿ ಹರಿದು ಹೋಗುತ್ತಿತ್ತು. ಅದರಲ್ಲಿ ಸ್ವಲ್ಪ ಭಾಗ ನೀರು ನಿಲ್ಲಿಸಿದರೂ, ಪೂನಾ ನಗರಕ್ಕೆ ಅದು ಸಾಕಾಗುತ್ತಿತ್ತು.

ವಿಶ್ವೇಶ್ವರಯ್ಯನವರ ಗಮನ ಇದರ ಕಡೆ ಹರಿಯಿತು. ಅವರು ಇದಕ್ಕಾಗಿ ಒಂದು ನೂತನ ಪದ್ಧತಿಯನ್ನು ಕಂಡು ಹಿಡಿದರು. ಸರ್ಕಾರದ ಅನುಮತಿ ಪಡೆದು, ಈ ಪದ್ಧತಿಯಂತೆ ತನ್ನಷ್ಟಕ್ಕೆ ತಾನೇ ತೆರೆಯುವ ಬಾಗಿಲುಗಳ ವ್ಯವಸ್ಥೆಯನ್ನು ಸರೋವರದ ಕೋಡಿಗೆ ಜೋಡಿಸ ಲಾಯಿತು. ಇದರಿಂದ ಕಟ್ಟೆಯನ್ನು ಎತ್ತರಿಸಬೇಕಾದ ಅವಶ್ಯಕತೆಯೇ ಇರಲಿಲ್ಲ. ಇದರಿಂದ ಸರೋವರದಲ್ಲಿ ಇನ್ನೂ ಕಾಲು ಭಾಗದಷ್ಟು ಹೆಚ್ಚು ನೀರು ನಿಲ್ಲತೊಡಗಿತು. ಅದಕ್ಕೂ ಹೆಚ್ಚಾದ ನೀರು ಬಂದಾಗ, ಬಾಗಿಲುಗಳು ತಮ್ಮಷ್ಟಕ್ಕೆ ತಾವೇ ತೆರೆದು, ನೀರನ್ನು ಹೊರಗೆ ಬಿಡುತ್ತಿದ್ದವು. ಈ ಕೌಶಲ್ಯವು ಜಗತ್ತನ್ನೇ ಆಕರ್ಷಿಸಿತು. ವಿಶ್ವೇಶ್ವರಯ್ಯನವರು ಈ ಬಾಗಿಲಿನ ಹಕ್ಕಿನ ಸ್ವಾಮ್ಯವನ್ನು ಪಡೆದರು. ಬೇರೆಯವರು ಇದನ್ನು ಉಪಯೋಗಿಸಿದರೆ ಸಂಭಾವನೆಯನ್ನು ಕೊಡಬೇಕಾಗಿತ್ತು.

ಆದರೆ ಅವರು ಆ ರೀತಿಯ ಯಾವ ಹಣವನ್ನೂ ಪಡೆಯಲಿಲ್ಲ. ಕನ್ನಂಬಾಡಿಯ ಅಣೆಕಟ್ಟಿನಲ್ಲೂ ಇದೇ ವ್ಯವಸ್ಥೆ ಇದೆ.

ಇದರ ಮಧ್ಯದಲ್ಲಿ ವಿಶ್ವೇಶ್ವರಯ್ಯನವರು ವಿದೇಶ ಪ್ರವಾಸ ಕೈಗೊಂಡರು. ಇದು ಅವರ ಜೀವನದಲ್ಲೆ ಮೊಟ್ಟಮೊದಲನೆಯದು. ೧೮೯೮ರಲ್ಲಿ ಜಪಾನ್ ದೇಶದ ಪ್ರವಾಸಮಾಡಿದರು. ತಮ್ಮ ಅನುಭವ ಗಳನ್ನು ಸೇರಿಸಿ, ಒಂದು ಸಣ್ಣ ಪುಸ್ತಕ ಬರೆದರು. ಇದು ಅವರ ಆಂತರಿಕ ಜೀವನದಲ್ಲೂ ಬಹಳ ಪ್ರಭಾವ ಬೀರಿತು.

# ೧೦

ವಿಶ್ವೇಶ್ವರಯ್ಯನವರಿಗೆ ಸಾಂಸಾರಿಕ ಸುಖವಿರಲಿಲ್ಲ. ಅವರಿಗೆ ತಾಯಿಯೇ ಸರ್ವಸ್ವವೂ ಆಗಿದ್ದರು. ಅವರೊಂದಿಗೆ ತಾಯಿಯವರು ಪೂನಾದಲ್ಲಿ ಕೆಲವು ದಿನ ಇದ್ದರು. ಆದರೆ ಮಡಿವಂತರಾದ ಅವರಿಗೆ ಅಲ್ಲಿರಲು ಇಷ್ಟವಾಗಲಿಲ್ಲ. ಆದುದರಿಂದ ಹಳ್ಳಿಗೇ ಹಿಂದಿರುಗಿದ್ದರು. ವಿಶ್ವೇಶ್ವರಯ್ಯನವರಿಗೆ ತಾಯಿಯ ಮೇಲೆ ಅಮಿತವಾದ ಪ್ರೀತಿ. ಆಕೆಯ ಮಡಿ, ಆಚಾರ ವ್ಯವಹಾರಗಳಿಗೆ ಎಂದೂ ಅಡ್ಡಿ ಬಂದವರಲ್ಲ. ಬಾಲ್ಯದಿಂದಲೂ ತಮ್ಮನ್ನು ಅನುಪಮ ಪ್ರೀತಿಯಿಂದ ಸಲಹಿದ, ತಾಯಿಯನ್ನು ಕಂಡರೆ ವಿಶ್ವೇಶ್ವರಯ್ಯನವರಿಗೆ ಬಹಳ ಗೌರವ. ಅವರ ತಾಯಿಗೂ ಅಷ್ಟೆ, ಮಗನ ಮೇಲೆ ಅಪಾರ ನಂಬಿಕೆ, ಪ್ರೀತಿ. ಆದರೆ ಅವರ ಮನಸ್ಸು ತಮ್ಮ ಮಡಿವಂತಿಕೆ ಹಾಗೂ ಮಗನ ಪ್ರೀತಿಗಳ ಮಧ್ಯೆ ತೂಗುಯ್ಯಾಲೆ ಆಡುತ್ತಿತ್ತು.

ಜಪಾನಿಗೆ ಹೋಗಿ ಬಂದ ಮೇಲೆ ಮಗನನ್ನು ಅಡಿಗೆ ಮನೆಯಲ್ಲಿ ಕೂರಿಸಿ, ಊಟ ಬಡಿಸಲು ವೆಂಕಚ್ಚಮ್ಮನವರ ಮನಸ್ಸು ಒಪ್ಪಲಿಲ್ಲ. ಸಮುದ್ರದ ಮೇಲಿನ ಪ್ರಯಾಣ ಬ್ರಾಹ್ಮಣರಿಗೆ ನಿಷಿದ್ಧ ಎಂಬುದು ಆಕೆಯ ನಂಬಿಕೆ. ಬೇರೆ ದೇಶಗಳಲ್ಲಿ ಸುತ್ತಾಡಿ, ಬೇರೆಯವರೊಂದಿಗೆಲ್ಲ ಊಟಮಾಡಿ ಮೈಲಿಗೆ ಆದವರು ಎಂಬ ಭಾವನೆ ಇತ್ತು.



ಅಂದು ದೂರಕ್ಕೆ ಕೂಡಿಸಿ ಊಟಕ್ಕೆ ಬಡಿಸಿದರು. ವಿಶ್ವೇಶ್ವರಯ್ಯನವರು ತಾಯಿಯ ಮನಸ್ಸನ್ನು ಇದರಿಂದ ಅರ್ಥಮಾಡಿಕೊಂಡರು. ಬಹುಕಾಲದಿಂದ ನಡೆದು ಬಂದಿರುವ ಮಾತೆಯ ಮಡಿವಂತಿಕೆಗೆ ಎಂತಹ ಪೆಟ್ಟು ತಗಲಿತ್ತೆಂದು ಅವರಿಗೆ ಅರ್ಥವಾಯಿತು. ಅಂದು ಅವರು ಒಂದು ಮಹತ್ತರ ತೀರ್ಮಾನವನ್ನು ಕೈಗೊಂಡರು. ಅಂಥಹ ತೀರ್ಮಾನವನ್ನು ಜಗತ್ತಿನ ಯಾವ ಹಿರಿಯ ವ್ಯಕ್ತಿಯೂ ಕೈಗೊಂಡಿರಲಾರ. ಏನೇ ಆಗಲಿ, ಇನ್ನು ಮುಂದೆ ತಾಯಿಯ ಮಡಿವಂತಿಕೆಯನ್ನು ರಕ್ಷಿಸಬೇಕು, ಆಕೆಯ ಮನಸ್ಸಿಗೆ ನೆಮ್ಮದಿಯನ್ನು ಕೊಡಬೇಕು - ಎಂಬುದೇ ಆ ತೀರ್ಮಾನ. ಇದನ್ನು ತಾಯಿಯ ಮರಣದವರೆಗೂ, ಆನಂತರವೂ ಶುದ್ಧ ಮನಸ್ಸಿನಿಂದ ಕಾಪಾಡಿಕೊಂಡು ಬಂದರು.

ಅಂದಿನಿಂದ ವಿಶ್ವೇಶ್ವರಯ್ಯನವರ ನಡವಳಿಕೆಯೇ ಬದಲಾವಣೆಯಾಯಿತು. ತಾಯಿಯನ್ನು ದೂರದಿಂದಲೆ ವಂದಿಸುವರು. ಅವರಿದ್ದ ಅಡಿಗೆ ಮನೆಯೊಳಗಾಗಲಿ, ದೇವರ ಮನೆಯೊಳಗಾಗಲಿ ಹೋಗಲಿಲ್ಲ.

ಹೆತ್ತ ಕರಳು ಇದನ್ನು ಎಷ್ಟೆಂದು ಸಹಿಸೀತು. ಕೊನೆಗೂ ಕರಗಿ ತಾವು ಆ ರೀತಿ ನಡೆದುಕೊಳ್ಳಬಾರದಾಗಿತ್ತು ಎಂದಿತು ಅವರ ಮನಸ್ಸು. ಒಳಗೆ ಬಾರೆಂದು, ಹತ್ತಿರ ಕೂಡೆಂದು ಬಲವಂತ ಮಾಡುವರು. ಆದರೆ ವಿಶ್ವೇಶ್ವರಯ್ಯನವರ ನಿರ್ಧಾರ ಬದಲಾಗಲಿಲ್ಲ. ಅದು ಅಚಲವಾಗಿತ್ತು. ಅಮ್ಮನ ಹೃದಯದ ತುಮುಲ ಹಾಗೂ ವಿಪ್ಲವ ಅವರಿಗೆ ತಿಳಿದಿತ್ತು. ಅವರ ಮಡಿಗೆ ಅಡ್ಡಿ ಬರಲೇ ಇಲ್ಲ.

# ೧೧

೧೯೦೪ರಲ್ಲಿ ಬೊಂಬಾಯಿ ಪ್ರಾಂತ್ಯದ ನೈರ್ಮಲ್ಯದ ಎಂಜಿನಿಯ ರಾಗಿ ವಿಶ್ವೇಶ್ವರಯ್ಯನವರು ನೇಮಕವಾದರು. ಅದುವರೆವಿಗೂ ಈ ಸ್ಥಾನ ಐರೋಪ್ಯರಿಗೇ ಮೀಸಲಾಗಿರುತ್ತಿತ್ತು.

ಅನಂತರ, ಬೊಂಬಾಯಿ ಪ್ರಾಂತ್ಯದ ಅನೇಕ ನಗರಗಳ ಕುಡಿಯುವ ನೀರಿನ ಮತ್ತು ಒಳಚರಂಡಿಗಳ ವ್ಯವಸ್ಥೆಯನ್ನು ಕೈಗೊಂಡರು. ಆಗ ಏಡನ್ ನಗರವೂ ಬೊಂಬಾಯಿ ಪ್ರಾಂತ್ಯಕ್ಕೆ ಸೇರಿತ್ತು. ಆ ನಗರದ ಸುತ್ತಲೂ ಮರಳುಗಾಡು. ಸಮುದ್ರದ ನೀರನ್ನು ಕಾಯಿಸಿ, ಹಬೆಯಿಂದ ನೀರನ್ನು ತಯಾರಿಸಿ, ಉಪಯೋಗಿಸಿಕೊಳ್ಳ ಲಾಗುತ್ತಿತ್ತು. ಇದಕ್ಕೆ ಬೇಕಾದಷ್ಟು ಹಣ ಖರ್ಚಾಗುತ್ತಿತ್ತು. ಇದನ್ನು ನಿಲ್ಲಿಸಿ, ಶಾಶ್ವತವಾದ ಒಂದು ವ್ಯವಸ್ಥೆಯನ್ನು ಏರ್ಪಾಟು ಮಾಡ ಬೇಕೆಂದು ಸರ್ಕಾರ ಯೋಚಿಸಿತ್ತು. ಆದುದರಿಂದ ಈ ಕೆಲಸವನ್ನು ವಿಶ್ವೇಶ್ವರಯ್ಯನವರಿಗೆ ವಹಿಸಿತು.

ಅವರು ಏಡನ್ನಿಗೆ ಹೋಗಿ ಸ್ಥಳವನ್ನು ಪರಿಶೀಲಿಸಿದರು. ಒಂದು ಯೋಜನೆಯನ್ನೂ ಸಿದ್ಧಗೊಳಿಸಿದರು. ಏಡನ್ನಿಗೆ ಉತ್ತರದಲ್ಲಿ ಸುಮಾರು ೬೦ ಮೈಲಿ ದೂರದಲ್ಲಿ ಬೆಟ್ಟಗಳ ಪ್ರದೇಶವಿದೆ. ಅಲ್ಲಿ

ಬೀಳುವ ಮಳೆ ನೀರು, ಸ್ವಲ್ಪ ದೂರ ಹರಿದು, ಲಹೆಜ್ ಬಳಿ ಇಂಗಿ ಹೋಗುತ್ತದೆ. ಅಲ್ಲಿ ಮುಚ್ಚಿದ ಬಾವಿಗಳನ್ನು ತೋಡಿ, ನೀರನ್ನು ಸಂಗ್ರಹಿಸಿ, ಅದನ್ನು ಪಂಪ್ ಮಾಡಿ, ಏಡನ್ನಿಗೆ ಸಾಗಿಸಬೇಕು. ಇದು ತುಂಬಾ ಪ್ರಯಾಸದ ಯೋಜನೆ. ಆದರೆ ಇದರ ವಿನಹ ಬೇರೆ ದಾರಿಯೆ ಇರಲಿಲ್ಲ. ಸರ್ಕಾರ ಈ ಯೋಜನೆಯನ್ನು ಅಂಗೀಕರಿಸಿ, ಮೂರು ವರ್ಷಗಳ ನಂತರ ಪೂರ್ಣಗೊಳಿಸಿತು.

೧೯೦೭ರಲ್ಲಿ ವಿಶ್ವೇಶ್ವರಯ್ಯನವರನ್ನು ಮುಖ್ಯ ಎಂಜಿನಿಯರನ್ನಾಗಿ ಬೊಂಬಾಯಿ ಸರ್ಕಾರ ನೇಮಿಸಿತು. ಇದರಿಂದ ಅನೇಕ ಅಧಿಕಾರಿಗಳಿಗೆ ಅಸಮಾಧಾನವನ್ನುಂಟು ಮಾಡಿತ್ತು. ಕಾರಣ, ಅವರನ್ನೆಲ್ಲ ಹಿಂದಕ್ಕೆ ತಳ್ಳಿ, ವಿಶ್ವೇಶ್ವರಯ್ಯನವರಿಗೆ ಈ ಕೆಲಸವನ್ನು ಕೊಟ್ಟದ್ದು. ಇಂತಹ ನಿರಾಶಾದಾಯಕ ಸ್ಥಿತಿಯಲ್ಲಿ ಅವರು ಕೆಲಸಮಾಡಲು ಇಷ್ಟಪಡಲಿಲ್ಲ. ಅದಕ್ಕೆ ಬದಲಾಗಿ ಅಲ್ಲಿಂದ ಹೊರಗೆ ಬರುವುದೇ ಉತ್ತಮವೆಂದು ಅವರಿಗೆ ತೋರಿತು. ಅಂತೆಯೆ ಅವರು ೧೯೦೮ರಲ್ಲಿ ರಾಜೀನಾಮೆ ಸಲ್ಲಿಸಿದರು. ಈ ೨೪ ವರ್ಷಗಳ ಬೊಂಬಾಯಿ ಸರ್ಕಾರದ ಸೇವೆಯಲ್ಲಿ ಅವರು ಅಪಾರ ಕಾರ್ಯಸಾಧನೆ ನಡೆಸಿದ್ದರು. ಇದನ್ನು ಗಮನದಲ್ಲಿಟ್ಟುಕೊಂಡು, ಸರ್ಕಾರವು ಹಕ್ಕಿಲ್ಲದಿದ್ದರೂ ಅವರಿಗೆ ನಿವೃತ್ತವೇತನವನ್ನು ನೀಡಿತು.

# ೧೨

ಬೊಂಬಾಯಿ ಸರ್ಕಾರದ ಅಷ್ಟು ವರ್ಷಗಳ ಸೇವೆಯಲ್ಲಿ ೧೪ ವರ್ಷಗಳನ್ನು ವಿಶ್ವೇಶ್ವರಯ್ಯನವರು ಪೂನಾದಲ್ಲೇ ಕಳೆದಿದ್ದರು. ಆದುದರಿಂ ಅವರಿಗೂ, ಅಲ್ಲಿನ ಇತರೆ ಸ್ವದೇಶ ಪ್ರೇಮಿಗಳಿಗೂ, ರಾಜಕೀಯ ವ್ಯಕ್ತಿಗಳಿಗೂ ಹತ್ತಿರದ ಪರಿಚಯ ಇದ್ದೇ ಇತ್ತು. ಮಹದೇವ ಗೋವಿಂದ ರಾನಡೆ, ಗೋಪಾಲಕೃಷ್ಣ ಗೋಖಲೆ, ಬಾಲ ಗಂಗಾಧರ ತಿಲಕ್-ಇವರುಗಳೊಂದಿಗೆ ನಿಕಟ ಸಂಬಂಧವೂ ಇತ್ತು. ಇವರ ಮೇಲೆ ವಿಶ್ವೇಶ್ವರಯ್ಯನವರ ಸರಳತೆ, ಸತ್ಯಪ್ರಿಯತೆಗಳ ಪ್ರಭಾವ ಬಿದ್ದಿತ್ತು. ಒಮ್ಮೆ ಗೋಖಲೆಯವರು ತಮ್ಮ ಮಿತ್ರರಾದ ರೈಟ್ ಆನರಬಲ್ ಶ್ರೀನಿವಾಸಶಾಸ್ತ್ರಿಗಳಿಗೆ ಹೇಳಿದ್ದರು—"ಎಷ್ಟು ಅಚ್ಚುಕಟ್ಟಾದ ಬಟ್ಟೆಯನ್ನು ಧರಿಸುತ್ತಾರೆ ನೋಡಿ! ಹೇಳಿದ ಸಮಯಕ್ಕೆ, ಕೆಲಸಕ್ಕೆ ಹಾಜರಾಗಿರುತ್ತಾರೆ. ಚಾಚೂ ತಪ್ಪುವುದಿಲ್ಲ. ಇಂಥಹವರು ಸರ್ಕಾರದಲ್ಲಿರಲು ಪುಣ್ಯಮಾಡಿರಬೇಕು."

ಅಲ್ಲಿನ ಪತ್ರಿಕೆಗಳಿಗೆ ಆರ್ಥಿಕ ಅಭಿವೃದ್ಧಿಯ ಬಗ್ಗೆ ಅನೇಕ ಲೇಖನಗಳನ್ನು ಬರೆದರು. ರಾನಡೆ, ಗೋಖಲೆಯವರ ಸಹಕಾರದಿಂದ ಪೂನಾದ ಹೀರಾಬಾಗ್‌ನಲ್ಲಿ 'ಡಕ್ಕನ್‌ಕ್ಲಬ್' ಅನ್ನು ಸ್ಥಾಪಿಸಿದರು. ಇದರ ಮುಖಾಂತರ ಸಾರ್ವಜನಿಕ ಜೀವನದಲ್ಲೂ ವಿಶ್ವೇಶ್ವರಯ್ಯನವರು

ಭಾಗವಹಿಸತೊಡಗಿದರು. ಇವರುಗಳ ರಾಷ್ಟ್ರಪ್ರೇಮ, ದೇಶಭಕ್ತಿಗಳನ್ನು ಅವರು ಮೆಚ್ಚಿಕೊಂಡರು.

೧೯೦೮-೧೯೦೯ರಲ್ಲಿ ವಿಶ್ವೇಶ್ವರಯ್ಯನವರು ತಮ್ಮ ಕೆಲಸದಿಂದ ನಿವೃತ್ತರಾದ ಕೂಡಲೆ ಅಮೆರಿಕಾ, ಯೂರೋಪ್ ಖಂಡಗಳ ಪ್ರವಾಸ ಕೈಗೊಂಡರು. ತಮ್ಮ ಸ್ವಂತ ಹಣದಲ್ಲೆ ಈ ಪ್ರವಾಸವನ್ನು ಪೂರ್ಣಗೊಳಿಸಿದರು. ಅಲ್ಲಿನ ಜಲವಸತಿ, ಅಣೆಕಟ್ಟುಗಳನ್ನು ಕಟ್ಟಿರುವ ರೀತಿ ಒಳಚರಂಡಿಗಳ ವ್ಯವಸ್ಥೆಗಳನ್ನು ಕಂಡು 'ಟಿಪ್ಪಣಿ' ಗಳನ್ನು ಮಾಡಿಕೊಂಡರು. ಅಲ್ಲಿನ ಅಧಿಕಾರಿಗಳೊಂದಿಗೆ, ಪರಿಣತರೊಂದಿಗೆ ಅವುಗಳ ಬಗೆಗೆ ವಿಚಾರ ವಿನಿಮಯ, ಚರ್ಚೆಗಳನ್ನು ನಡೆಸಿದರು. ಕೆನಡಾದಲ್ಲಿ ಕಾರುಗಳ ತಯಾರಿಕೆಯನ್ನು ನೋಡಿದರು.

ಈ ಪ್ರವಾಸದಲ್ಲಿದ್ದಾಗ ಅವರಿಗೆ ಹೈದರಾಬಾದಿನ ನಿಜಾಮರಿಂದ ಕರೆ ಬಂದಿತು. ಹೈದರಾಬಾದ್ ನಗರದ ಮಧ್ಯದಲ್ಲಿ ಮೂಸಿ ನದಿ ಹರಿಯುತ್ತದೆ. ಸೆಪ್ಟೆಂಬರ್ ೧೯೦೮ರಲ್ಲಿ ಮೂಸಿ, ಅದರ ಉಪನದಿ ಈಸಿಯಲ್ಲಿ ಹೆಚ್ಚು ಮಳೆ ಬಿದ್ದುದರ ಪರಿಣಾಮವಾಗಿ ಪ್ರವಾಹ ಉಂಟಾಯಿತು. ನದಿಗಳ ಪಾತ್ರದಲ್ಲಿದ್ದ ೨೨೧ ಕೆರೆಗಳು ಒಡೆದು ಹೋದವು. ಪ್ರವಾಹದ ನೀರು ಹೈದರಾಬಾದಿನೊಳಕ್ಕೂ ನುಗ್ಗಿ ಬಂದಿತು. ಇದರಿಂದ ಅನೇಕ ದೊಡ್ಡ ಮನೆಗಳು ಕೊಚ್ಚಿಹೋದುವು. ಅಪಾರ ಹಾನಿ ಉಂಟಾಯಿತು. ಇನ್ನು ಮುಂದೆ ಹೀಗಾಗದಂತೆ ಆಗಲು ಶಾಶ್ವತ ವ್ಯವಸ್ಥೆಯನ್ನು ಮಾಡಲು ನಿಜಾಂ ಸರ್ಕಾರ ತೀರ್ಮಾನಿಸಿತು. ಅದಕ್ಕಾಗಿ ಓರ್ವ ಉತ್ತಮ ಎಂಜಿನಿಯರ್‌ರವರ ಅವಶ್ಯಕತೆ ಇತ್ತು. ಅವರ ದೃಷ್ಟಿಗೆ ವಿಶ್ವೇಶ್ವರಯ್ಯನವರು ಕಾಣಿಸಿದರು. ಅಂತೆಯೆ ಅವರನ್ನು ಬರುವಂತೆ ಕೇಳಿಕೊಂಡರು. ಪ್ರವಾಸ ಮುಗಿಸಿಕೊಂಡು ಕೆಲಸದ ಮೇಲೆ ಹಾಜರಾಗುವುದಾಗಿ ಅವರು ತಿಳಿಸಿದರು.

ಅದರಂತೆಯೆ ಏಪ್ರಿಲ್ ೧೯೦೯ರಲ್ಲಿ ಹೈದರಾಬಾದಿಗೆ ಬಂದು ವಿಶೇಷ ಎಂಜಿನಿಯರ್ ಹುದ್ದೆಯನ್ನು ಸ್ವೀಕರಿಸಿದರು. ಕೂಡಲೆ ಇತರ ಎಂಜಿನಿಯರುಗಳ ಸಹಾಯದಿಂದ ನದಿ ಹರಿಯುವ ಪ್ರದೇಶದ ಸರ್ವೆ ನಡೆಸಿ ಅನಂತರ ಒಂದು ಯೋಜನೆ ಸಿದ್ಧಗೊಳಿಸಿದರು. ಅದರ ಪ್ರಕಾರ ಮೂಸಿ, ಈಸಿ ನದಿಗಳಲ್ಲಿ ಹರಿದು ಬರುವ ಹೆಚ್ಚುವರಿ ನೀರನ್ನು ಬೇರೆ ಬೇರೆ ಘಟ್ಟಗಳಲ್ಲಿ ನಿಲ್ಲಿಸುವುದು. ಇದಕ್ಕಾಗಿ ಆ ನದಿಗಳಿಗೆ ಅಡ್ಡಲಾಗಿ ಅಲ್ಲಲ್ಲಿ ಅಣೆಕಟ್ಟುಗಳನ್ನು ಕಟ್ಟಬೇಕು. ಹೈದರಾಬಾದ್ ನಗರದಲ್ಲಿ ನದಿಯ ದಡಗಳನ್ನು ಎತ್ತರಿಸಿ, ಅಲ್ಲಲ್ಲಿ ಉದ್ಯಾನ ವನಗಳನ್ನು ನಿರ್ಮಿಸ ಬೇಕು. ಇದರಿಂದ ನಗರ ರಕ್ಷಣೆಯೂ ಆಯಿತು, ಅದರ ಸೌಂದರ್ಯವೂ ಹೆಚ್ಚಿತು. ನಗರ ಸಂರಕ್ಷಣೆ, ಒಳಚರಂಡಿಗಳ ವ್ಯವಸ್ಥೆಗಳಲ್ಲೂ ಸೂಕ್ತ ಏರ್ಪಾಡು ಮಾಡಿದರು. ಈ ಎಲ್ಲ ಯೋಜನೆಗಳನ್ನು ಹೈದರಾಬಾದ್ ಸರ್ಕಾರಕ್ಕೆ ಒಪ್ಪಿಸಿದರು. ಈ ಕಾರ್ಯಗಳು ೧೯೧೭ರಲ್ಲಿ ಪ್ರಾರಂಭ ವಾಗಿ ೧೯೩೧ರಲ್ಲಿ ಪೂರ್ಣವಾದವು.


# ೧೩

ಹೈದರಾಬಾದ್‌ನಲ್ಲಿದ್ದಾಗಲೆ ಮೈಸೂರಿನ ಶ್ರೇಷ್ಠ ಎಂಜಿನಿಯರ್ ಹುದ್ದೆಯನ್ನು ಸ್ವೀಕರಿಸುವಂತೆ ವಿಶ್ವೇಶ್ವರಯ್ಯನವರನ್ನು ಆಹ್ವಾನಿಸಲಾಗಿತ್ತು. ತಮ್ಮ ನಾಡಿಗೆ ಸೇವೆ ಸಲ್ಲಿಸುವ ಸುಸಮಯ ಇದೆಂದು ಅವರು ತಿಳಿದರು. ಆದರೂ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸಹಕರಿಸಿದರೆ ಮಾತ್ರ ಬರುತ್ತೇವೆಂದರು. ಈ ನಿಯಮಕ್ಕೆ ಮಹಾರಾಜರೂ ಕಟ್ಟುಬಿದ್ದು, ಒಪ್ಪಿಗೆ ನೀಡಿದರು. ಅಂತೆಯೆ ೧೫-೧೧-೧೯೦೯ ರಲ್ಲಿ ಮೈಸೂರು ರಾಜ್ಯದ ಶ್ರೇಷ್ಠ ಎಂಜಿನಿಯರ್ ಆದರು.

ಇದುವರೆವಿಗಾಗಲೆ ಎರಡು ಸಲ ವಿದೇಶ ಪ್ರವಾಸಮಾಡಿ ಬಂದಿದ್ದರು. ಅಲ್ಲಿನ ಕೈಗಾರಿಕೆಗಳ ಅಭಿವೃದ್ಧಿ, ತಾಂತ್ರಿಕ ಶಿಕ್ಷಣಗಳ ಪ್ರಗತಿಯನ್ನು ಗಮನಿಸಿದ್ದರು. ಅದೇ ರೀತಿಯಲ್ಲಿ ಮೈಸೂರು ರಾಜ್ಯವನ್ನೂ 'ಮಾದರಿ ರಾಜ್ಯ' ವನ್ನಾಗಿ ಮಾಡಬೇಕೆಂದು ಅವರು ತೀರ್ಮಾನಿಸಿಕೊಂಡರು. ಇದರೊಂದಿಗೆ ಅವರು ರೈಲ್ವೇ ಕಾರ್ಯದರ್ಶಿಯಾಗಿಯೂ ನೇಮಕಗೊಂಡರು.

ಮೊದಲು ರಾಜ್ಯದಲ್ಲಿನ ಪರಿಸ್ಥಿತಿಯನ್ನೆಲ್ಲ ಅಧ್ಯಯನ ಮಾಡಿದರು. ಎಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬಹುದು, ಎಲ್ಲಿ ಜಲಾಶಯಗಳನ್ನು ನಿರ್ಮಿಸಬಹುದು ಎಂದು ತೀರ್ಮಾನಿಸಿಕೊಂಡರು. ಹೊಸ ರೈಲು ಮಾರ್ಗಗಳ ಒಂದು ಯೋಜನೆಯನ್ನು ಸಿದ್ಧಗೊಳಿಸಿ ಸರ್ಕಾರದ ಮುಂದಿಟ್ಟರು.

ಶಿವನ ಸಮುದ್ರದ ಬಳಿ ವಿದ್ಯುತ್ ತಯಾ
ಕಾರ್ಯ ನಡೆಯುತ್ತಿದ್ದು, ಅದರಲ್ಲಿನ ಹೆಚ್ಚು ಭಾ
ಕೋಲಾರದ ಚಿನ್ನದ ಗಣಿಗಳಿಗೆ ಒದಗಿಸಲಾಗುತ್ತಿತ್ತು



ದರೆ ಕಾವೇರಿಯಲ್ಲಿ ಸತತವಾಗಿ ನೀರು ಹರಿಯುತ್ತಿರಲಿಲ್ಲ. ಇದರಿಂದ
ದ್ಯುತ್ ತಯಾರಿಕೆ ಹೆಚ್ಚು ಕಡಿಮೆ ಆಗಿ, ಚಿನ್ನದ ಗಣಿಗಳಿಗೆ ವಿದ್ಯುತ್
ದಗಿಸುವುದರಲ್ಲೂ ಏರು ಪೇರಾಗುವ ನಷ್ಟವನ್ನು ಸರ್ಕಾರವು
ಂಪೆನಿಗೆ ತುಂಬಿಸಿ ಕೊಡುತ್ತಿತ್ತು. ಇದಕ್ಕಾಗಿ ಕಾವೇರಿ
ದೀ ಪಾತ್ರದ ಮೇಲ್ಭಾಗದಲ್ಲಿ ಒಂದು ಅಣೆಕಟ್ಟನ್ನು ಕಟ್ಟಿ,



ಒಂದೇ ರೀತಿಯಲ್ಲಿ ನೀರು ಒದಗುವಂತೆ ಮಾಡಬೇಕಾಗಿತ್ತು. ಈ ರೀ
ಮಾಡುವುದರಿಂದ, ನೀರು ಸಂಗ್ರಹಿಸುವುದರಿಂದ, ವಿದ್ಯುತ್ ತಯಾರಿ
ಯನ್ನು ಹೆಚ್ಚು ಮಾಡುವುದೇ ಅಲ್ಲದೆ ವ್ಯವಸಾಯಕ್ಕೂ ನೀರನ್ನು
ಉಪಯೋಗಿಸಿಕೊಳ್ಳಬಹುದಾಗಿತ್ತು. ಇದಕ್ಕಾಗಿ ಕನ್ನಂಬಾಡಿ ಅಣೆ
ಕಟ್ಟನ್ನು ನಿರ್ಮಿಸಬೇಕೆಂದು, ಒಂದು ಯೋಜನೆಯನ್ನು ತಯಾರಿಸಿದರು

ಈ ರೀತಿಯ ಅಣೆಕಟ್ಟಿನ ಯೋಜನೆ ವಿಚಾರ ಭಾರತದಲ್ಲಿ ಸಾ
ದದ್ದು ಅದೇ ಮೊದಲು. ಅದಕ್ಕಾಗಿ ಅಪಾರ ಹಣ ವೆಚ್ಚವಾಗಬೇಕಾ
ಗಿತ್ತು. ಆಗುವ ವೆಚ್ಚ ೨೫೩ ಲಕ್ಷ ರೂಗಳು. ಅಂವರೆ ಸಂಸ್ಥಾನ
ಒಂದು ವರ್ಷದ ಆದಾಯ. ಈ ಕಾರಣದಿಂದ ಇತರೇ ಅಧಿಕಾರಿಗಳ
ಇದರ ಬಗೆಗೆ ಉತ್ಸಾಹವಿರಲಿಲ್ಲ. ಎಲ್ಲಿ ಅಷ್ಟೊಂದು ಹಣ ಪೋಲಾಗ
ವುದೋ ಎಂಬ ಹೆದರಿಕೆಯಿಂದ ಸರಕಾರವೂ ಅನಾಸಕ್ತಿ ತೋರಿತು
ಇದನ್ನು ತಿಳಿದ ವಿಶ್ವೇಶ್ವರಯ್ಯನವರಿಗೆ ತುಂಬಾ ನಿರಾಶೆಯಾಯಿತು
ರಾಜಿನಾಮೆ ಕೊಡುವ ಇಚ್ಛೆಯೂ ಇತ್ತು.

ಇದು ಹೇಗೋ ಮಹಾರಾಜರಾದ ನಾಲ್ಮಡಿ ಕೃಷ್ಣರಾಜ ಒಡೆಯ
ರಿಗೆ ತಿಳಿಯಿತು. ಅವರು ವಿಶ್ವೇಶ್ವರಯ್ಯನವರನ್ನು ಕರೆಯಿಸಿಕೊಂಡು
ತಾವು ಎಲ್ಲ ಸಹಾಯವನ್ನು ನೀಡುವುದಾಗಿಯೂ, ಕೆಲಸ ಮುಂದುವರಿಸ
ವಂತೆಯೂ ತಿಳಿಸಿದರು. ಇದರಿಂದ ವಿಶ್ವೇಶ್ವರಯ್ಯನವರು ಸಂತೋ
ಗೊಂಡರು. ಇಮ್ಮಡಿ ಉತ್ಸಾಹದಿಂದ ಕೆಲಸಮಾಡತೊಡಗಿದರು.

ಇನ್ನೇನು ಕೆಲಸ ಪ್ರಾರಂಭಮಾಡಬೇಕು. ಅಷ್ಟರಲ್ಲಿ ಕಾವೇ
ನೀರಿನ ಮತ್ತೋರ್ವ ಭಾಗಸ್ಥರಾದ ಮದರಾಸಿನವರು ‘ ಈ ಕಟ್ಟೆ ಕಟ್ಟ
ಕೂಡದು ’ ಎಂದು ತಕರಾರು ಮಾಡಿದರು. ಆಗ ಮದರಾಸಿನವ
ಮೆಟ್ಟೂರು ಅಣೆಕಟ್ಟನ್ನು ಕಟ್ಟುವ ಯೋಜನೆ ಮಾಡಿದ್ದರು. ದೂ

ಕೇಂದ್ರ ಸರ್ಕಾರದವರೆಗೂ ಹೋಯಿತು. ಅವರು ಮೈಸೂರು ವಾದದಲ್ಲಿನ ಅರ್ಥವನ್ನು ಗಮನಿಸಿದರು. ಅಣೆಕಟ್ಟನ್ನು ಕಟ್ಟಲು ಒಪ್ಪಿಗೆಯನ್ನೇನೋ ನೀಡಿದರು. ಆದರೆ ಅಣೆಕಟ್ಟನ್ನು ೮೦ ಅಡಿಗಿಂತ ಎತ್ತರ ಕಟ್ಟಬಾರದು ಎಂಬ ನಿಬಂಧನೆ ಹಾಕಿದರು.

ಈ ರೀತಿಯ ಒಪ್ಪಿಗೆ ದೊರೆತ ಕೂಡಲೆ, ತಮ್ಮ ವಾದ ಸರಿ ಎಂಬುದು ವಿಶ್ವೇಶ್ವರಯ್ಯನವರಿಗೆ ಮನದಟ್ಟಾಯಿತು. ಆಗ ಯಾವ ರಾಷ್ಟ್ರ ನಾಯಕನೂ ತೋರದ ಅಸನು ಸಾಹಸವನ್ನು ತೋರಿದರು.

ಎಂಬತ್ತು ಅಡಿಗಳಷ್ಟು ಎತ್ತರಕ್ಕೆ ಕಟ್ಟೆಕಟ್ಟಬೇಕೆಂಬ ಅನುಮತಿ ಇದ್ದರೂ ೧೪೦ ಅಡಿ ಎತ್ತರದ ಅಣೆಕಟ್ಟೆಗೆ ಸರಿಹೋಗುವಂತಹ ಒಂದು ನೂರ ಹನ್ನೊಂದು ಅಡಿ ಅಗಲದ ಅಸ್ತಿಭಾರ ಹಾಕಿಸಲಾಯಿತು. ಮಹಾಜರು, ದಿವಾನರು, ಸರ್ಕಾರದ ಅಧಿಕಾರಿಗಳು - ಎಲ್ಲರೂ ಭಯಗೊಂಡಿದ್ದರು. ಕೇಂದ್ರ ಸರ್ಕಾರ ಒಪ್ಪದಿದ್ದಲ್ಲಿ ಇಷ್ಟು ಲಕ್ಷ ರೂಪಾಯಿಗಳು ಎಲ್ಲಿ ನೀರಿನಲ್ಲಿ ಹೋಮಮಾಡಿದಂತಾಗುತ್ತದೆಯೋ ಎಂದು ಗಾಬರಿಗೊಂಡಿದ್ದರು.

ಆದರೆ ವಿಶ್ವೇಶ್ವರಯ್ಯನವರು ನಿರ್ಭಯರಾಗಿದ್ದರು. ಅವರ ನಿರ್ಧಾರ ಅಚಲವಾಗಿತ್ತು. ಮತ್ತೆ ದೂರು ಕೇಂದ್ರ ಸರ್ಕಾರಕ್ಕೆ ಹೋಯಿತು. ವೈಜ್ಞಾನಿಕವಾಗಿ, ಕರಾರುವಾಕ್ಕಾಗಿ ವಿಶ್ವೇಶ್ವರಯ್ಯನವರು ತಮ್ಮ ವಾದವನ್ನು ಮಂಡಿಸಿ, ಮೈಸೂರು, ಮದರಾಸು ರಾಜ್ಯಗಳಲ್ಲಿರುವ ಕಾವೇರಿ ನದಿ ಪಾತ್ರವೆಷ್ಟು, ಜಲಾಶಯದ ಭೂಮಿಯೆಷ್ಟು ಅದರಂತೆ ಎಷ್ಟೆಷ್ಟು ನೀರು ಹಂಚಿಕೊಳ್ಳಬೇಕೆಂದು ವಿವರಿಸಿದರು.

ಕೇಂದ್ರ ಸರ್ಕಾರವು ಈ ವಾದದಲ್ಲಿನ ಸತ್ಯವನ್ನು ಗಮನಿಸಿತು. ಈ ಯೋಜನೆಗೆ ತನ್ನ ಸಂಪೂರ್ಣ ಒಪ್ಪಿಗೆಯನ್ನು ನೀಡಿತು. ಮದರಾಸ್ ಸುಮ್ಮನಾಗಬೇಕಾಯಿತು.

೧೯೧೧ ನವೆಂಬರ್‌ನಲ್ಲಿ ಪ್ರಾರಂಭವಾದ ಕನ್ನಂಬಾಡಿ ಅಣೆ ಕಟ್ಟು, ಪೂರ್ತಿಯಾದ ಮೇಲೆ ಮರುಭೂಮಿಯಂತಿದ್ದ ಮಂಡ್ಯ ಜಿಲ್ಲೆ ನಂದನವನವಾಯಿತು. ಶಿವನ ಸಮುದ್ರದಲ್ಲಿನ ವಿದ್ಯುತ್ ತಯಾರಿಕೆ ಹೆಚ್ಚಾಗಿ ಬೆಂಗಳೂರುವರೆಗಿನ ಅನೇಕ ಕೈಗಾರಿಕೆಗಳಿಗೆ ವಿದ್ಯುತ್ತನ್ನು ಒದಗಿಸಿತು. ಕನ್ನಂಬಾಡಿ ಬಳಿಯ 'ಬೃಂದಾವನ'ವು ಒಂದು ಬೆಳಕಿನ ರಾಜ್ಯವಾಯಿತು.

# ೧೪

ವಿಶ್ವೇಶ್ವರಯ್ಯನವರು ಮಾಡುವ ಎಲ್ಲ ಕೆಲಸ ಅಚ್ಚುಕಟ್ಟು. ಎಲ್ಲ ನಿಯಮದ ಪ್ರಕಾರವೇ ನಡೆಯಬೇಕು. ಅವರು ನುಡಿದಂತೆ ನಡೆದು, ನಡೆದಂತೆ ನುಡಿಯುವವರು. ಶಿಸ್ತು, ಸಂಯಮಕ್ಕೆ ಹೆಸರಾಗಿದ್ದವರು. ಸರಿಯಾದ ಸಮಯಕ್ಕೆ ಕೆಲಸಕ್ಕೆ ಹಾಜರಾಗುತ್ತಿದ್ದರು. ಇತರರೂ ಹಾಗೆಯೇ ಇರಬೇಕೆಂದು ನಿರೀಕ್ಷಿಸುತ್ತಿದ್ದರು. ಅವರು ಒಂದು ನಿಮಿಷವನ್ನೂ ವ್ಯರ್ಥಮಾಡಿದವರಲ್ಲ. ಅವರ ಕೈಬರವಣಿಗೆ ತುಂಬಾ ಗುಂಡಾಗಿತ್ತು. ಇದು ಅವರ ಅಂತರಂಗ, ಬಹಿರಂಗ ಶುದ್ಧಿಗಳನ್ನು ತೋರುತ್ತಿತ್ತು. ಅವರು ಉಡಿಗೆ, ತೊಡಿಗೆಗಳಲ್ಲೂ ತುಂಬಾ ಶಿಸ್ತಾಗಿ ಇರುತ್ತಿದ್ದರು. ಗರಿಗರಿಯಾಗಿ ಇಸ್ತ್ರಿಮಾಡಿದ ಓಪನ್ ಕಾಲರ್ ಸೂಟು, ಮೈಸೂರು ಜರಿ ರೂಮಾಲನ್ನು ಸದಾ ಧರಿಸುತ್ತಿದ್ದರು. ಬಟ್ಟೆ ಧರಿಸುವಿಕೆಯಲ್ಲಿನ ಅಚ್ಚುಕಟ್ಟನ್ನು ಕಂಡು ಆಗ ಅನೇಕರು ಅವರಂತೆಯೇ ಇರತೊಡಗಿದರು. ಇವರ ಶುಭ್ರ ಉಡುಗೆಯನ್ನು ಕಂಡೇ ಇವರಿಗೆ ಜನ ಮಾರುಹೋಗುತ್ತಿದ್ದರು.

ವಿಶ್ವೇಶ್ವರಯ್ಯನವರು ಆತ್ಮಗೌರವವುಳ್ಳ ಧೀರರು. ಅವರು ಶ್ರೇಷ್ಠ ಎಂಜಿನಿಯರಾಗಿ ನಿಯುಕ್ತರಾದ ಪ್ರಾರಂಭದಲ್ಲಿ ದಸರಾ ನಡೆಯುತ್ತಿತ್ತು. ಅದರಲ್ಲಿ ಐರೋಪ್ಯರು ಮಾತ್ರ ಕುರ್ಚಿಗಳಲ್ಲಿ ಕುಳಿತು

ಕೊಳ್ಳಬೇಕಾಗಿತ್ತು. ದಿವಾನರು, ಉನ್ನತ ಅಧಿಕಾರಿಗಳಾದಿಯಾಗಿ ಉಳಿದ ಭಾರತೀಯರೆಲ್ಲರೂ ಮುಂಡಿಯೂರಿ ಜಮಖಾನದ ಮೇಲೆ ಕುಳಿತುಕೊಳ್ಳಬೇಕಾಗಿತ್ತು. ಇದು ವಿಶ್ವೇಶ್ವರಯ್ಯನವರಿಗೆ ಸುತರಾಂ ಇಷ್ಟವಾಗಲಿಲ್ಲ.

ಮುಂದಿನ ವರ್ಷ ಮಾಮೂಲಿನಂತೆ ದರ್ಬಾರಿಗೆ ಆಹ್ವಾನ ಹೋಯಿತು. ವಿಶ್ವೇಶ್ವರಯ್ಯನವರು 'ದರ್ಬಾರಿಗೆ ಹಾಜರಾಗುವುದರಿಂದ ವಿನಾಯಿತಿ ಕೊಡು' ವಂತೆ ಕೇಳಿಕೊಂಡರು. ವಿಷಯ ನಾಲ್ಮಡಿ ಕೃಷ್ಣರಾಜ ಒಡೆಯರವರೆವಿಗೂ ಹೋಯಿತು. ಅವರು ಸಂಗತಿ ತಿಳಿದು ಎಲ್ಲರಿಗೂ ಕುರ್ಚಿಗಳನ್ನು ಹಾಕುವಂತೆ ಆಜ್ಞೆ ಮಾಡಿದರು. ಇದರಿಂದ ಮಹಾರಾಜರ, ಭಾರತೀಯರ ಸ್ಥಾನಮಾನ, ಗೌರವಗಳು ಹೆಚ್ಚಿದವು. ಇದರೊಂದಿಗೆ ಮತ್ತೊಂದು ಬದಲಾವಣೆಯೂ ಆಯಿತು. ಅರಮನೆಯ ಉತ್ಸವಗಳು ಕಾಲಕಾಲಕ್ಕೆ ನಡೆಯುತ್ತಿರಲಿಲ್ಲ. ಮಹಾರಾಜರಲ್ಲಿ ಇದನ್ನು ಬಿನ್ನವಿಸಿಕೊಂಡು ಗೊತ್ತಾದ ಕಾಲಕ್ಕೆ ಉತ್ಸವಗಳು ಆರಂಭವಾಗಿ ಮುಗಿಯುವಂತೆ ಏರ್ಪಡಿಸಲಾಯಿತು.

## ೧೫

ಮೈಸೂರು ಸಂಸ್ಥಾನಕ್ಕೆ ಬಂದುದು ವಿಶ್ವೇಶ್ವರಯ್ಯನವರಿಗೆ ಆತ್ಮೀಯವಾಗಿ ಸಂತೋಷವೇ ಆಗಿತ್ತು. ರಜ, ಭಾನುವಾರಗಳ ದಿನ ನೇರವಾಗಿ ಮುದ್ದೇನಹಳ್ಳಿಗೆ ತಾಯಿಯ ಸನ್ನಿಧಿಗೆ ಧಾವಿಸಿ ಬರುತ್ತಿದ್ದರು. ಶನಿವಾರ ರಾತ್ರಿ ಅವರು ಬರುವುದನ್ನೇ ತಾಯಿ ಕಾಯುತ್ತಿದ್ದರು. ಅಂದು ಅವರಿಗೆ ಉಪವಾಸ, ವೆಂಕಟರಮಣಸ್ವಾಮಿಯ ದಿನ. ಅವರು ಅಂದು ಪೂರ್ತಿ ಮೈಲಿಗೆಯಲ್ಲೇ ಇರುತ್ತಿದ್ದರು. ಕಾಯಿಸಿಟ್ಟಿರುವ ನೀರು, ಬಿಸಿ ಮಾಡಿದ ಹರಳೆಣ್ಣೆ ಬಚ್ಚಲಮನೆಯಲ್ಲಿ ಸಿದ್ಧವಾಗಿರುತ್ತಿದ್ದುವು. ಮಗನಿಗೆ ತಾವೇ, ತಮ್ಮ ಕೈಯ್ಯಾರೆ ಎಣ್ಣೆ ನೀರು ಹಾಕಬೇಕೆಂಬುದು ಅವರ ಇಷ್ಟ.

ಅಮ್ಮ ಎಣ್ಣೆ ನೀರು ಹಾಕುವುದು ವಿಶ್ವೇಶ್ವರಯ್ಯನವರಿಗೆ ತುಂಬಾ ಇಷ್ಟವಾದ ಕಾರ್ಯ. ಮನೆ ಒಳಗೆ ಬಂದ ಕೂಡಲೆ ದಿರುಸುಗಳನ್ನೆಲ್ಲ ತೆಗೆದಿಟ್ಟು, ಪಂಚೆ ಉಟ್ಟುಕೊಂಡು, ಕೈಕಾಲು ತೊಳೆದು ತಾಯಿಗೆ ಪ್ರಣಾಮಮಾಡುತ್ತಿದ್ದರು. ತಾಯಿ ಆಶೀರ್ವಾದ ಮಾಡುತ್ತಿದ್ದರು. ಅನಂತರ ಮಣೆ ಹಾಕಿ, ಅವರನ್ನು ಕೂಡಿಸಿ, ಕೈತುಂಬಾ ಎಣ್ಣೆಯನ್ನು ತೆಗೆದುಕೊಂಡು, ತಲೆಗೆ ಒತ್ತುತ್ತಾ ನೂರು ವರ್ಷ ಬಾಳಿ, ವಿದ್ಯಾ ಬುದ್ಧಿ ಪಡೆದು - ಇತ್ಯಾದಿ ಆಶೀರ್ವಚನದೊಂದಿಗೆ ನಿಧಾನವಾಗಿ ಎಣ್ಣೆ

ಇಡುತ್ತಿದ್ದರೆ, ವಾರದ ದುಡಿಮೆ, ಕ್ಷಣದಲ್ಲಿ ಹಾರಿಹೋಗುತ್ತಿತ್ತು. ದಣಿದ ಮೆದುಳಿಗೆ ಅದೆಷ್ಟೋ ತಂಪು. ಮಗನಿಗೆ ಐವತ್ತು ವರ್ಷಗಳ ಮೇಲಾಗಿದ್ದರೂ ಆ ತಾಯಿಗೆ ಇನ್ನೂ ಪುಟ್ಟ ಮಗುವೇ ! ಚಿಕ್ಕಂದಿನಲ್ಲಿ ಹೇಳುತ್ತಿದ್ದ ಆಶೀರ್ವಾದವನ್ನೇ ಇನ್ನೂ ಹೇಳುತ್ತಿದ್ದರು. ಅದನ್ನು ಆಲಿಸಲು ವಿಶ್ವೇಶ್ವರಯ್ಯನವರಿಗೆ ಅಪರಿಮಿತ ಆನಂದ.

ತಾಯಿಯ ಆಶೀರ್ವಾದ ಫಲವೋ ಎಂಬಂತೆ ವಿಶ್ವೇಶ್ವರಯ್ಯನವರು ನೂರುವರ್ಷಗಳನ್ನೂ ದಾಟಿ, ಬಾಳಿದರು.

# ೧೬

ಆದರೆ ಇಂಥಹ ತಾಯಿಯನ್ನೂ ತಮ್ಮ ಮಾತಿನಿಂದ ಕಟ್ಟಿ ಹಾಕಿದ ಸಂದರ್ಭವೊಂದಿತ್ತು. ೧೯೧೨ ನವೆಂಬರ್‌ನಲ್ಲಿ ಮೈಸೂರಿನ ದಿವಾನ್ ಪದವಿಯನ್ನು ಸ್ವೀಕರಿಸಬೇಕೆಂದು ಅವರಿಗೆ ಆಹ್ವಾನ ತಲುಪಿತು. ವಿಶಾಲ ಕ್ಷೇತ್ರದಲ್ಲಿ ಸೇವೆ ಮಾಡುವ ಸುಯೋಗ ದೊರೆತದ್ದು ಅವರಿಗೆ ಸಂತೋಷದ ವಿಷಯವೇ ಆಗಿತ್ತು. ಆದರೆ ತಾವು ಮಾಡುವ ಸೇವೆ ಶುಭ್ರ ಕೈಗಳಿಂದ, ಯಾವ ಬಂಧು, ಬಾಂಧವ್ಯದ ಮೋಹಕ್ಕೆ ಒಳಗಾಗದಂತೆ ಮಾಡಬೇಕೆಂದು ತೀರ್ಮಾನಿಸಿಕೊಂಡರು. ಸ್ವಬುದ್ಧಿ ಶಕ್ತಿಯ ಆಧಾರದ ಮೇಲೆ ಪ್ರತಿಯೊಬ್ಬನೂ ಮೇಲೇರಬೇಕೆಂದು ಅವರು ತಿಳಿಸುತ್ತಿದ್ದರು. ಆದರೆ ಹೆಂಗರಳಿನ ತಾಯಿ ಯಾರಿಗಾದರೂ ಕೆಲಸ ಕೊಡಿಸು, ಶಿಫಾರಸು ಮಾಡು ಎಂದು ತಿಳಿಸಿದರೆ ಏನು ಮಾಡುವುದು !

ದಿವಾನ ಪದವಿಯ ಆಹ್ವಾನದ ಸರಕಾರಿ ಪತ್ರವನ್ನು ತಾಯಿಯ ಪಾದಗಳ ಬಳಿ ಇಟ್ಟರು. ವೆಂಕಚ್ಚಮ್ಮನವರು ತಮ್ಮ ಮಗನಿಗೆ ದಿವಾನ ಪದವಿಗಾಗಿ ಆಹ್ವಾನ ಬಂದಿರುವುದನ್ನು ತಿಳಿದು ಸಂತೋಷಪಟ್ಟರು. ಹಿಂದೊಮ್ಮೆ ಬಡಬ್ರಾಹ್ಮಣ ವಟುವಾಗಿದ್ದವನು ಇಂದು ಒಂದು ಸಂಸ್ಥಾನದ ಅತ್ಯಂತ ದೊಡ್ಡ ಸ್ಥಾನದಲ್ಲಿ....! ವಿಧಿವಿಲಾಸವೆ ! ಎಂದುಕೊಂಡರು.

" ನೀನು ನಿಷ್ಠುರಿ ಎಂದರೂ ಸರಿಯೆ, ನೀನು ನನಗೆ ಒಂದು ಮಾತು ಕೊಡಬೇಕಮ್ಮ...." ಎಂದು ವಿಶ್ವೇಶ್ವರಯ್ಯನವರು ತಾಯಿಯನ್ನು ಕೇಳಿದರು. ಎಂದೂ ಆ ರೀತಿ ಕೇಳದವರು ಇಂದೇಕೆ ಹೀಗೆ ಕೇಳುತ್ತಾರೆ ಎಂದುಕೊಂಡರು ತಾಯಿ.

" ಆಯಿತು ಮಾತು ಕೊಟ್ಟೆ "

" ನಮ್ಮ ನೆಂಟರಿಗೇ ಆಗಲಿ, ಹತ್ತಿರದ ಬಂಧುಗಳಿಗೇ ಆಗಲಿ ನೌಕರಿ ಕೊಡಿಸುವಂತೆ, ಇನ್ನೇನಾದರೂ ಪ್ರಮೋಷನ್ ಕೊಡಿಸುವಂತೆ ನೀನು ಶಿಫಾರಸು ಮಾಡಬಾರದು. ಹಾಗೇನಾದರೂ ಹೇಳುವಂತಿದ್ದರೆ, ಈಗಲೇ ಕೆಲಸವನ್ನು ಒಪ್ಪಿಕೊಳ್ಳುವುದಿಲ್ಲ...."

" ಹಿಂದೆಲ್ಲ ನೆಂಟರು, ಬಂಧುಗಳು, ಪರಿಚಿತರಿಂದ ತುಂಬಾ ಸಹಾಯವನ್ನು ಪಡೆದಿದ್ದೇವೆ. ಉಪಕಾರಕ್ಕೆ ಪ್ರತ್ಯುಪಕಾರ ಮಾಡುವುದು ನಮ್ಮ ಧರ್ಮವಲ್ಲವೆ ? "

" ಅಂತಹ ಸಂದರ್ಭ ಬಂದಾಗ ಕೈಯ್ಯಾರೆ ಧನಸಹಾಯ ಮಾಡೋಣಾಮ್ಮ. ದಾಕ್ಷಿಣ್ಯಕ್ಕೆ ಕಟ್ಟು ಬೀಳುವುದು ಬೇಡ...."

" ಒಬ್ಬಿಬ್ಬರಿಗೆ ಕೆಲಸಕೊಡಿಸಿದರೆ ಏನಪ್ಪಾ ನಷ್ಟ ? "

" ನೀತಿ, ನಿಯಮ, ನಿರ್ದಾಕ್ಷಿಣ್ಯವಾಗಿ ಕಲಸ ಮಾಡುವ ವ್ಯಕ್ತಿಗೆ ಅದು ಅಡ್ಡಿ ಬರುತ್ತದಮ್ಮ. ಇಷ್ಟು ದಿನಗಳವರೆ ನಿಷ್ಪಕ್ಷಪಾತವಾಗಿ ನಡೆದುಕೊಂಡೆ. ಮುಂದೆಯೂ ಹಾಗೆಯೇ ಇರುವಂತೆ ನಡೆಸಿಕೊಡು."

ತಾಯಿಯ ಮನ ತುಯ್ಯಲಾಡಿತು. ಒಂದೆಡೆ ಮಗನ ಭವಿಷ್ಯದ ಮುಖಾಂತರ ರಾಷ್ಟ್ರಾಭಿವೃದ್ಧಿ ; ಮತ್ತೊಂದೆಡೆ ದಾರಿದ್ರ್ಯದಲ್ಲಿ ಮುಳುಗಿರುವ ತನ್ನ ಬಂಧು, ಬಳಗದ ಅಭಿವೃದ್ಧಿ.

ಈ ಘರ್ಷಣೆಗಳ ನಡುವೆ ಒಂದೆರಡು ದಿನಗಳು ಉರುಳಿದವು. ಕೊನೆಗೆ ಪುತ್ರಪ್ರೇಮ, ಅದಕ್ಕಿಂತ ಹೆಚ್ಚಾಗಿ ದೇಶದ ಅಭಿವೃದ್ಧಿಯ ಮಾತು ಗೆದ್ದಿತು. ಮಗನ ಮಾತಿಗೆ ಒಪ್ಪಿಗೆ ನೀಡಿದರು. ಸೋದರ ಮಾವಂದಿರಾದ ಹೆಚ್. ರಾಮಯ್ಯನವರಿಂದಲೂ ಇದೇ ಮಾತನ್ನು ಪಡೆದರು.

ಅನಂತರ ದಿವಾನ್ ಪದವಿಯನ್ನು ಸ್ವೀಕರಿಸಿದರು.

ಕೂಡಲೇ ದೇಶದ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡರು. ಶಿಕ್ಷಣ, ಕೈಗಾರಿಕೆ, ವಾಣಿಜ್ಯ, ವ್ಯಾಪಾರ, ಲೋಕೋಪಯೋಗಿ ಕಾರ್ಯಗಳಿಗೆ ಸಂಬಂಧಪಟ್ಟ ಬೇರೆ ಬೇರೆ ಯೋಜನೆಗಳನ್ನು ಸಿದ್ಧಗೊಳಿಸಿದರು. ಮೈಸೂರು ರಾಜ್ಯವನ್ನು ರಾಮರಾಜ್ಯವನ್ನಾಗಿ ಮಾಡಬೇಕೆಂಬುದು ಅವರ ಹಂಬಲ. ದೇಶದಾದ್ಯಂತ ಹೆಚ್ಚಿನ ಚಟುವಟಿಕೆ ತಲೆದೋರಿತು.

೧೯೧೩ರಲ್ಲಿ ಮೈಸೂರರಸರಿಗೂ ಬ್ರಿಟಿಷರಿಗೂ ಹೊಸ ಒಪ್ಪಂದ ಆಯಿತು. ವಿಶ್ವೇಶ್ವರಯ್ಯನವರು ಇದರಲ್ಲಿ ಮುಖ್ಯ ಪಾತ್ರವಹಿಸಿ, ಒಳಾಡಳಿತದಲ್ಲಿ ಮಹಾರಾಜರಿಗೆ ಹೆಚ್ಚು ಸ್ವಾತಂತ್ರ್ಯ ಸಿಕ್ಕುವಂತೆ ಪತ್ರಗಳನ್ನು ಸಿದ್ಧಗೊಳಿಸಿದರು.

ಅದೇ ವರ್ಷ ವಿಧಾನಸಭೆಗಳಲ್ಲಿ ಅನೇಕ ಬದಲಾವಣೆಗಳನ್ನು ಮಾಡಿದರು. ವಿದ್ಯಾಭ್ಯಾಸಕ್ರಮವನ್ನು ಆಧುನಿಕವನ್ನಾಗಿ ಮಾಡಿ, ಅನೇಕ ತಾಂತ್ರಿಕ ಶಾಲೆಗಳನ್ನು ಸ್ಥಾಪಿಸಿದರು. ಆದರೆ ಮೈಸೂರು ರಾಜ್ಯಕ್ಕೆ ತನ್ನದೇ ಆದ ವಿಶ್ವವಿದ್ಯಾನಿಲಯವಿರಲಿಲ್ಲ. ಶಿಕ್ಷಣ ಶಾಖಾಧಿಕಾರಿಗಳನ್ನು ವಿದೇಶಗಳಿಗೆ ಕಳುಹಿಸಿದರು. ಅವರು ಅಲ್ಲಿನ ವಿಶ್ವವಿದ್ಯಾನಿಲಯಗಳ ಕೆಲಸವನ್ನು ವೀಕ್ಷಿಸಿ ಒಂದು ವರದಿಯನ್ನು ಸಿದ್ಧಗೊಳಿಸಿದರು. ಅದರ ಸಹಾಯದಿಂದ ಒಂದು ಯೋಜನೆಯನ್ನು ತಯಾರಿಸಿ,

ಕೇಂದ್ರ ಸರ್ಕಾರಕ್ಕೆ ಕಳುಹಿಸಿದರು. ಕೂಡಲೆ ಒಪ್ಪಿಗೆಯೇನೋ ಸಿಕ್ಕಿತು. ಆದರೆ ಮದರಾಸು ವಿಶ್ವವಿದ್ಯಾನಿಲಯದವರು ತಕರಾರು ಮಾಡಿದರು. ಆದರೆ ಅದಕ್ಕೆ ಗಮನ ಕೊಡದೆ ವಿಶ್ವೇಶ್ವರಯ್ಯನವರು ೧೯೧೬ ಜುಲೈ ಒಂದರಂದು ಮೈಸೂರು ವಿಶ್ವವಿದ್ಯಾನಿಲಯವನ್ನು ಮೈಸೂರು ನಗರದಲ್ಲಿ ಪ್ರಾರಂಭಿಸಿದರು.


056326

# ೧೭

ಇವರು ಅನೇಕ ಹೊಸ ರೈಲುಮಾರ್ಗಗಳನ್ನು ಸೂಚಿಸಿದ್ದರು. ಅವುಗಳಲ್ಲಿ ಅನೇಕವು ಇವರ ಕಾಲದಲ್ಲೇ ನಿರ್ಮಾಣವಾದವು. ಅದು ವರೆವಿಗಿನ ಎಲ್ಲ ರೈಲುಮಾರ್ಗಗಳನ್ನು 'ಮೈಸೂರು ರೈಲ್ವೇ' ಎಂಬ ಹೆಸರಿನಿಂದ, ಮೈಸೂರು ರಾಜ್ಯಕ್ಕೆ ವಹಿಸಿಕೊಡಲಾಯಿತು.

ರೇಷ್ಮೆ, ಗಂಧದೆಣ್ಣೆ, ಕಬ್ಬಿಣ ಮತ್ತು ಉಕ್ಕು ಇತ್ಯಾದಿ ಅನೇಕ ಕೈಗಾರಿಕೆಗಳ ಸ್ಥಾಪನೆಗಾಗಿ ಅವರು ಪ್ರಯತ್ನಿಸುತ್ತಿದ್ದರು. ಅಷ್ಟರಲ್ಲಿ ಮೊದಲನೆಯ ಮಹಾಯುದ್ಧ ಪ್ರಾರಂಭವಾಯಿತು. ಬ್ರಿಟಿಷ್ ಸರ್ಕಾರವು ದೇಶೀಯ ಸಂಸ್ಥಾನಗಳಲ್ಲಿ ಯಾವ ರೀತಿಯ ಹೊಸ ಕೈಗಾರಿಕೆಗಳನ್ನೂ ಸ್ಥಾಪಿಸಕೂಡದು ಎಂದು ನಿರ್ಬಂಧಿಸಿತು. ಇದು ವಿಶ್ವೇಶ್ವರಯ್ಯನವರ ಕೈಗಳನ್ನು ಕಟ್ಟಿಹಾಕಿತು. ಆದರೂ ಧೈರ್ಯಗೆಡದೆ ಇದ್ದ ಅವರು ಹಣಕಾಸಿನ ಮಿತಿಯಲ್ಲೇ ಅನೇಕ ಕಾರ್ಯಗಳನ್ನು ಮಾಡಿದರು. ಆಡಳಿತದಲ್ಲಿ ಅನೇಕ ಸುಧಾರಣೆಗಳನ್ನು ತಂದರು. ಸ್ಥಳೀಯ ಸಂಸ್ಥೆಗಳ ಅಧಿಕಾರಗಳನ್ನು ಸ್ಪಷ್ಟಗೊಳಿಸಿದರು. ಜೋಗ್ ಜಲಪಾತದ ಬಳಿ ವಿದ್ಯುತ್ ಉತ್ಪತ್ತಿ ಮಾಡುವ ಯೋಜನೆಯನ್ನು ಪ್ರಾರಂಭಿಸಿದರು. ಇದೇ ಮುಂದೆ ಮಹಾತ್ಮಾ ಗಾಂಧಿ ವಿದ್ಯುತ್‌ತಯಾರಿಕಾ ಕೇಂದ್ರವಾಯಿತು. ಭಟ್ಕಲ್ ಬಂದರಿನ ಪ್ರಾಮುಖ್ಯತೆಯನ್ನು

ಗ್ರಂಥಾಲಯ, ... ವಿದ್ಯಾಲಯ, ...



ತಿಳಿಸಿ, ಅದರ ಅಭಿವೃದ್ಧಿಯ ಯೋಜನೆಗಳನ್ನು ಸಿದ್ಧಗೊಳಿಸಿದರು. ಇವರು ಮೈಸೂರು ಬ್ಯಾಂಕ್, ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು ವಾಣಿಜ್ಯ ಸಂಘಗಳನ್ನು ಸ್ಥಾಪಿಸಿದರು. ಸಾರ್ವಜನಿಕರಿಗೆ ಉದ್ಯಮಗಳನ್ನು ಸ್ಥಾಪಿಸಲು ಸಾಲ ಕೊಡಿಸುವ ಏರ್ಪಾಡು ಮಾಡಿದರು.



ಹೋಟೇಲುಗಳು ಮುದ್ರಣಾಲಯಗಳು ಇವರ ಕಾಲದಲ್ಲೇ ಪ್ರಾರಂಭವಾದವು. ಗೃಹ ಹಾಗೂ ಗ್ರಾಮ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಟ್ಟರು. ಭದ್ರಾವತಿಯಲ್ಲಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸಿದರು. ವಿಮಾನ ಕಾರ್ಖಾನೆ ಮತ್ತು ಮೋಟಾರು, ತಯಾರಿಕೆಗೆ ಬುನಾದಿ ಹಾಕಿದರು. ಹೀಗೆ ಅವರು ಸ್ಥಾಪಿಸಿದ, ಯೋಜಿಸಿದ ಕೈಗಾರಿಕೆಗಳು ಒಂದೇ, ಎರಡೇ ! ಅನೇಕವಾಗಿದ್ದವು. ಅವರ ಯೋಜನೆಗಳನ್ನೆಲ್ಲ ಕಾರ್ಯರೂಪಕ್ಕೆ ತರಲು ಐವತ್ತು ವರ್ಷಗಳಿಗೂ ಹೆಚ್ಚು ಕಾಲ ಬೇಕಾಯಿತು.

ವಿಶ್ವೇಶ್ವರಯ್ಯನವರು ಹಗಲಿರುಳೆನ್ನದೆ ಮಾತೃಭೂಮಿಗಾಗಿ ದುಡಿ
ದರು. ಒಂದು ನಿಮಿಷವೂ ಬಿಡುವು ತೆಗೆದುಕೊಳ್ಳಲಿಲ್ಲ. ತಮ್ಮಂತೆಯೇ
ಇತರರೂ ದುಡಿಯಬೇಕೆಂದು ಆಶಿಸಿದರು. ಸ್ವಂತ ಕೆಲಸ, ಸರಕಾರಿ
ಕೆಲಸಗಳ ಮಧ್ಯೆ ತುಂಬಾ ವ್ಯತ್ಯಾಸವನ್ನು ಅವರು ಕಂಡುಕೊಂಡಿ
ದ್ದರು. ಸರಕಾರದ ಕಾಗದ, ಮಸಿಕಡ್ಡಿ, ಲಕೋಟೆಗಳನ್ನು ಸರಕಾರಿ
ಕೆಲಸಕ್ಕೆ ಉಪಯೋಗಿಸುತ್ತಿದ್ದರು. ಪ್ರವಾಸಕ್ಕೆ ಹೋದಾಗ ತಮ್ಮೊಂ
ದಿಗೆ ತೆಗೆದುಕೊಂಡು ಹೋಗುತ್ತಿದ್ದ ಮೇಣದ ಬತ್ತಿಗಳ ಕಟ್ಟುಗಳ
ಮೇಲೆ ಸ್ವಂತ, ಸರಕಾರದ್ದು ಎಂದು ಬರೆದು ಅದರಂತೆಯೇ ಉಪ
ಯೋಗಿಸುತ್ತಿದ್ದರು.

ದಿವಾನರಾಗಿ ತಾವು ವಾಸವಾಗಿದ್ದ 'ಬಾಲಬ್ರೂಯಿ' ಎಂಬ
ಬಂಗಲೆಗೆ ತಿಂಗಳಿಗೆ ೨೫೦ ರೂ. ಬಾಡಿಗೆ ಕೊಡುತ್ತಿದ್ದರು. ತಮ್ಮ
ನೌಕರರ ಬಗ್ಗೆ ಕರುಣೆಯನ್ನೂ, ಗೌರವವನ್ನೂ ತೋರುತ್ತಿದ್ದರು.
ಅವರನ್ನು ಮರ್ಯಾದೆಯಿಂದ ಮಾತನಾಡಿಸುತ್ತಿದ್ದರು. ಊಟದ
ಸಮಯದಲ್ಲಿ ಬಾಲಬ್ರೂಯಿಯಲ್ಲಿ ಕೆಲಸದಲಿರುವವರು ಯಾರು
ಬಂದರೂ ಊಟಕ್ಕೆ ಬಡಿಸಬೇಕೆಂದು ಪರಿಚಾರಕರಿಗೆ ತಿಳಿಸಿದ್ದರು.
ಅದೇ ರೀತಿ ನೋಟ್‌ಬುಕ್, ಪೆನ್ಸಿಲ್ ಕೈನಲ್ಲಿ ಇಲ್ಲದೆ ಬರುವ ನೌಕ
ನನ್ನು ಕಂಡರೆ 'ಕೈ ಬೀಸಿಕೊಂಡು ಊಟಕ್ಕೆ ದಯಮಾಡಿಸಿದಿರೋ ?
ಎಂದು ತರಾಟೆಗೂ ತೆಗೆದುಕೊಳ್ಳುತ್ತಿದ್ದರು.

ಯಾವ ಕೆಲಸ ಮಾಡಿದರೂ ವಿಶ್ವೇಶ್ವರಯ್ಯನವರು ಅಚ್ಚು
ಕಟ್ಟಾಗಿ ಮಾಡುತ್ತಿದ್ದರು. ಅದರಲ್ಲಿ ಒಂದು ರೀತಿ, ನಿಯಮ ಇತ್ತು.
ದಿವಾನರಾದ ಹೊಸತು. ಪ್ರಜಾಪ್ರತಿನಿಧಿ ಸಭೆಯಲ್ಲಿ ಅವರು ಭಾಷ
ಮಾಡಬೇಕಾಗಿತ್ತು. ಅನೇಕ ವರ್ಷಗಳು ಮಹಾರಾಷ್ಟ್ರದಲ್ಲಿದ್ದ
ರಿಂದ ಉಚ್ಚಾರಣೆಯಲ್ಲಿ ತಪ್ಪು ಉಂಟಾದೀತು ಎಂಬ ಅಳುಕ

ಅದಕ್ಕಾಗಿ ಕನ್ನಡ ಚೆನ್ನಾಗಿ ಬಲ್ಲ ಗುಮಾಸ್ತರ ಎದುರಿಗೆ ಭಾಷಣ ಮಾಡಿ, ಸರಿಯಾಗಿತ್ತು ಎಂಬ ನಂಬಿಕೆ ಬಂದಮೇಲೆ, ಸಭೆಯಲ್ಲಿ ಕನ್ನಡದಲ್ಲಿ ಭಾಷಣ ಮಾಡಿದರು.

ಒಮ್ಮೆ ತಮ್ಮ ಹಳ್ಳಿಗೆ ಹೋಗಿದ್ದರು. ಅಲ್ಲಿನ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಸಿಹಿ ತಿಂಡಿಯನ್ನು ಹಂಚಿದರು. ಯಾವಾಗಲೂ ಅವರು ಹಾಗೆ ಮಾಡುತ್ತಿದ್ದುದು ರೂಢಿ. ಮಕ್ಕಳಿಗೆ ಏನಾದರೂ ಉಪದೇಶ ಕೊಡುವಂತೆ ಪ್ರಾರ್ಥಿಸಿದರು. ವಿಶ್ವೇಶ್ವರಯ್ಯನವರು ಏನೋ ನಾಲ್ಕು ಮಾತು ಹೇಳಿದರು. ಅದರಿಂದ ಅವರು ತೃಪ್ತರಾಗಲಿಲ್ಲ. ಮತ್ತೊಂದು ದಿನ ಸಿದ್ಧಮಾಡಿಕೊಂಡು ಬಂದು ಮಕ್ಕಳಿಗೆ ಭಾಷಣ ಮಾಡಿದರು.

# ೧೮

ವಿಶ್ವೇಶ್ವರಯ್ಯನವರು ಜಾತಿ-ಮತಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಟ್ಟವರಲ್ಲ. ಅವರಿಗೆ ಎಲ್ಲರೂ ಒಂದೆ. ದಿವಾನರಾಗಿ ಅವರು ಸಂಚಾರ ಹೊರಟಾಗ ಬಿಡಾರದಲ್ಲಿ ಬೇರೆಬೇರೆ ಜಾತಿಯವರಿಗೆ, ಬೇರೆ ಬೇರೆ ಕಡೆ ಊಟದ ವ್ಯವಸ್ಥೆಯಾಗುತ್ತಿತ್ತು. ಇದನ್ನು ತಿಳಿದ ಕೂಡಲೆ, ಆ ರೀತಿಯ ಬೇರೆ ಬೇರೆ ಪಂಕ್ತಿಗಳು ಇರಕೂಡದು, ಎಲ್ಲರಿಗೂ ಏಕ ಕಾಲದಲ್ಲಿ ಊಟಕ್ಕೆ ಬಡಿಸಬೇಕು ಎಂದು ತಿಳಿಸಿದರು. ಮಹಾರಾಜರ ವರ್ಧಂತಿಯ ಸಮಯದಲ್ಲೂ ಇದೇ ರೀತಿಯ ಬೇರೆ ಬೇರೆ ಪಂಗಡಗಳಿಗೆ ಬೇರೆ ಬೇರೆ 'ರಾಜ ಭೋಜನ'ದ ಏರ್ಪಾಡಾಗುತ್ತಿತ್ತು. ಈ ಪದ್ಧತಿಯನ್ನು ಅವರು ತಪ್ಪಿಸಿಬಿಟ್ಟರು. ಈ ರೀತಿಯ ತಾರತಮ್ಯವನ್ನು ವಿರೋಧಿಸುತ್ತಿದ್ದರು.

ವಿಶ್ವೇಶ್ವರಯ್ಯನವರು ಅನೇಕ ದಾನಧರ್ಮಗಳನ್ನು ಮಾಡಿದ್ದರು. ಹಣ ಸಂಪಾದನೆಗೆ ಆಸೆ ಪಡುತ್ತಿರಲಿಲ್ಲ. ದಿವಾನರಾಗಿ ಎರಡು, ಮೂರು ವರ್ಷವಾದ ಮೇಲೆ ಅವರ ಸಂಬಳವನ್ನು ಹೆಚ್ಚು ಮಾಡುತ್ತೇವೆಂದು ಮಹಾರಾಜರು ತಿಳಿಸಿದರು. ಆದರೆ ಅವರು ಒಪ್ಪಲಿಲ್ಲ. ಕಷ್ಟದಲ್ಲಿದ್ದ ತಮ್ಮ ಬಂಧುಗಳಿಗೆಲ್ಲ, ತಮ್ಮ ಸಂಬಳ ಬಂದ ಕೂಡಲೇ, ಇಷ್ಟಿಷ್ಟು ಎಂದು ಹಣವನ್ನು ಕಳುಹಿಸಿಬಿಡುತ್ತಿದ್ದರು. ಭದ್ರಾವತಿಯ

ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಕಾರ್ಯದರ್ಶಿಗಳಾಗಿದ್ದಾಗ ಬಂದ ಗೌರವಧನವನ್ನು ಬೆಂಗಳೂರಿನ ತಾಂತ್ರಿಕ ಶಾಲೆಗೆ ನೀಡಿದರು.

ಅವರು ತಾಯಿಯ ಮಾತಿಗೆ ತುಂಬಾ ಗೌರವ ಕೊಡುತ್ತಿದ್ದರು. ತಾವು ದಿವಾನರಾದರೂ ತಾಯಿಯ ಎದುರಿಗೆ ಅವರಿನ್ನೂ ಮಗುವೆ ಆಗಿದ್ದರು. ಒಮ್ಮೊಮ್ಮೆ ವೆಂಕಚ್ಚಮ್ಮನವರು ಮಗನನ್ನು ಗದರಿಸಿ ಕೊಳ್ಳುತ್ತಿದ್ದುದೂ ಉಂಟು.

ಆಗ ಮೊದಲನೆಯ ಮಹಾಯುದ್ಧದ ಸಮಯ. ಕೆಲಸದ ಒತ್ತಡ ಬಹಳವಿತ್ತು. ಊಟ ಮಾಡುವಾಗ ಪೇಪರ್ ಓದುವುದೋ ರಿಕಾರ್ಡ್‌ಗಳನ್ನು ನೋಡುವುದರಲ್ಲೋ ತಲ್ಲೀನರಾಗುತ್ತಿದ್ದರು. ಓದುತ್ತಾ ಓದುತ್ತಾ ಊಟದ ಕಡೆ ಗಮನವೆ ಹೋಗುತ್ತಿರಲಿಲ್ಲ. ಬೆರಳುಗಳೆಲ್ಲ ಒಣಗಿ ಹೋಗುತ್ತಿದ್ದುವು. ಇದನ್ನು ಕಂಡು ವೆಂಕಚ್ಚಮ್ಮನವರು ಎಚ್ಚರಿಸಿದರು :

" ಊಟಮಾಡುವಾಗಲೆಲ್ಲ ಓದಬಾರದಪ್ಪ ವಿಶು ! ಅದರಿಂದ ಆರೋಗ್ಯ ಕೆಡುತ್ತೆ. ತಿಂದ ಅನ್ನ ಮೈಗೆ ಹತ್ತೋಲ್ಲ...."

ಕೂಡಲೆ ಆ ಪದ್ಧತಿಯನ್ನು ನಿಲ್ಲಿಸಿದರು. ಮುಂದೆ ಎಂದಿಗೂ ಆ ರೀತಿ ಮಾಡಲಿಲ್ಲ. ನಿಷ್ಕಲ್ಮಷ ಮನಸ್ಸಿನಿಂದ ಊಟಮಾಡುತ್ತಿದ್ದರು.

ತಮ್ಮ ತಾಯಿಗಾಗಿ ಅವರು ಹಳ್ಳಿಯಲ್ಲಿ ಒಂದು ಉತ್ತಮವಾದ ಹಣ್ಣಿನ ತೋಟವನ್ನು ಬೆಳೆಸಿದ್ದರು. ಹಳ್ಳಿಗೆ ಸ್ವಲ್ಪ ದೂರದಲ್ಲಿದ್ದ ಕಣಿವೆ ನಾರಾಯಣಪುರದಲ್ಲಿ ಒಂದು ಚಿಕ್ಕ ಮಾವಿನ ತೋಟವನ್ನು ಅವರ ತಾಯಿಯವರೇ ನಿರ್ಮಿಸಿದ್ದರು. ಅದರ ಹಣ್ಣುಗಳನ್ನು ಆಕೆ ಆ ಹಳ್ಳಿಯವರಿಗೇ ಹಂಚಿ ಬಿಡುತ್ತಿದ್ದರು.

ತಮ್ಮ ಹಳ್ಳಿಯ ರೈತರೆಂದರೆ ವೆಂಕಚ್ಚಮ್ಮನವರಿಗೆ ತುಂಬಾ ಪ್ರೀತಿ. ಅವರಿಗೆ ಬೇರೆ ಮನೆಗಳನ್ನು ಕಟ್ಟಿಸಿಕೊಡೆಂದು ಮಗನಿಗೆ ಹೇಳಿದರು. ಅದರಂತೆ ಮುದ್ದೇನ ಹಳ್ಳಿಯಲ್ಲಿನ ಎಲ್ಲ ರೈತರಿಗೂ ಅಚ್ಚುಕಟ್ಟಾಗಿರುವ ಮನೆಗಳನ್ನು ಸಾಲಾಗಿ ತಮ್ಮ ಸ್ವಂತ ಖರ್ಚಿನಲ್ಲಿ ಕಟ್ಟಿಸಿಕೊಟ್ಟರು. ಹಳ್ಳಿಯ ಬಳಿಯಲ್ಲಿನ ಕಣಿವೆಗೆ ಚಿಕ್ಕ ಕಟ್ಟೆಯನ್ನು ಹಾಕಿ ಕೆರೆಯನ್ನು ಕಟ್ಟಿಸಿಕೊಟ್ಟರು.

ವೆಂಕಚ್ಚಮ್ಮನವರ ಅಂತ್ಯಕಾಲ ಸಮೀಪಿಸಿತು. ಅವರನ್ನು ಬೆಂಗಳೂರಿಗೆ ಕರೆತರಲಾಯಿತು. ಹಳ್ಳಿಯ ರೈತರನ್ನೆಲ್ಲ ಒಮ್ಮೆ ನೋಡಬೇಕೆಂದು ಅವರು ಆಶಿಸಿದರು. ಅಂತೆಯೇ ವಾಹನಗಳಲ್ಲಿ ರೈತರನ್ನೆಲ್ಲ ಕರೆಯಿಸಲಾಯಿತು. ವಿಶ್ವೇಶ್ವರಯ್ಯನವರ ಸಹೋದರರು, ಅವರ ಮಕ್ಕಳು ಆದಿಯಾಗಿ ಎಲ್ಲರೂ ಸುತ್ತ ನೆರೆದರು. ಎಲ್ಲರನ್ನೂ ಕಣ್ಣು ತುಂಬ ನೋಡಿದರು. ಕಣ್ಣು ಮುಚ್ಚಿದವರು ಮತ್ತೆ ತೆರೆಯಲಿಲ್ಲ.

ವಿಶ್ವೇಶ್ವರಯ್ಯನವರು ಭೀಷ್ಮನಂಥವರು. ತಾವು ಮನಸ್ಸಿನಲ್ಲಿ ಹಿಂದೆ ಮಾಡಿಕೊಂಡ ಪ್ರತಿಜ್ಞೆ ನೆನಪಿಗೆ ಬಂದಿತು. ತಾವು ಮುಟ್ಟುವಿಕೆಯಿಂದ ಅಪವಿತ್ರವಾಗುತ್ತದೆಯೆಂಬ ಭಯದಿಂದ, ತಾಯಿಯ ಪಾರ್ಥಿವ ಶರೀರವನ್ನು ಅವರು ಮುಟ್ಟಲಿಲ್ಲ. ಹಾಗೆಯೇ ಕೊನೆಯ ನಮಸ್ಕಾರವನ್ನು ಅರ್ಪಿಸಿದರು.

ತಾಯಿಯ ಸಾವು ಅವರ ಮೇಲೆ ತುಂಬಾ ಪ್ರಭಾವ ಬೀರಿತು. ಆ ಐವತ್ತೆಂಟು ವರ್ಷಗಳಲ್ಲಿ ಅವರೊಂದಿಗೆ ಸುಖ, ದುಃಖ, ಕಷ್ಟಗಳಲ್ಲಿ ಭಾಗಿಯಾಗಿ, ಅವರನ್ನು ರಾಷ್ಟ್ರನಾಯಕರನ್ನಾಗಿ ಮಾಡಿ ಕಣ್ಣು ಮುಚ್ಚಿದ್ದರು. ಅವರ ತಾಯಿತುಂಬಾ ಆತ್ಮೀಯವಾದ ವಸ್ತುವೊಂದನ್ನು ಕಳೆದುಕೊಂಡಂತೆ ಅವರಿಗೆ ಭಾಸವಾಯಿತು. ಇದು ಅವರ ರಾಜಕೀಯ ಜೀವನದಲ್ಲಿ ಪ್ರಭಾವ ಬೀರಿತು.

ಮೈಸೂರು ರಾಜ್ಯದ ರಾಜಕೀಯ ವಾತಾವರಣ ಆಗ ಚೆನ್ನಾಗಿರಲಿಲ್ಲ. ಮದರಾಸಿನಲ್ಲಿದ್ದಂತೆ ಇಲ್ಲಿಯೂ ಬ್ರಾಹ್ಮಣ ಸಂಗಡದ ವಿರುದ್ಧ ಚಳುವಳಿ ಪ್ರಾರಂಭವಾಗಿತ್ತು. ಇಂತಹ ಕಲುಷಿತ ವಾತಾವರಣದಲ್ಲಿರಲು ಅವರು ಇಷ್ಟಪಡಲಿಲ್ಲ. ಅವರು ತಮ್ಮ ದಿವಾನ ಪದವಿಗೆ ರಾಜೀನಾಮೆ ನೀಡಿದರು, ಮಹಾರಾಜರಿಗೂ, ಅವರಿಗೂ ಸಾಕಷ್ಟು ಭಿನ್ನಾಭಿಪ್ರಾಯವೂ ಇತ್ತು. ಆದುದರಿಂದ ರಾಜೀನಾಮೆಯನ್ನು ಅಂಗೀಕರಿಸುವಂತೆ ಮಹಾರಾಜರನ್ನು ಒತ್ತಾಯಪಡಿಸಿದರು. ಏಳೆಂಟು ತಿಂಗಳವರೆಗೆ ರಹಸ್ಯವಾಗಿದ್ದು, ಕೊನೆಗೆ ಒಪ್ಪಿಕೊಂಡರು.

೯-೧೨-೧೯೧೮ರಂದು ಸರ್ಕಾರಿ ಕಾರ್‌ನಲ್ಲಿ ಅಠಾರಾ ಕಛೇರಿಗೆ ಹೋಗಿ, ತಮ್ಮ ಕೆಲಸಗಳನ್ನೆಲ್ಲ ಬೇರೆಯವರಿಗೆ ವಹಿಸಿದರು. ಎಲ್ಲರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ತಮ್ಮ ಸ್ವಂತ ಕಾರ್‌ನಲ್ಲಿ ಮನೆಗೆ ಹಿಂದಿರುಗಿದರು.

# ೧೯

ಇದಾದ ಮೂರು ತಿಂಗಳಿಗೆ ೧೯೧೯ರಲ್ಲಿ ತಮ್ಮ ಸ್ನೇಹಿತರೊಂ ದಿಗೆ ಪ್ರಪಂಚ ಪರ್ಯಟನೆ ಮಾಡಿದರು. ಆ ದೇಶದಲ್ಲಿನ ಕೈಗಾರಿಕೆ, ವಿಶ್ವವಿದ್ಯಾನಿಲಯಗಳ ಕಾರ್ಯಕ್ರಮಗಳನ್ನು ವೀಕ್ಷಿಸಿದರು.

ಅಲ್ಲಿಂದ ಹಿಂದಿರುಗಿ ಬರುತ್ತಲೇ, ಅವರೇ ಸ್ಥಾಪಿಸಿದ್ದ ಭದ್ರಾ ವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಅಧೋಗತಿಗೆ ಇಳಿದುದು ತಿಳಿದು ಬಂತು. ೧೯೨೩ರಲ್ಲಿ ಅದರ ಆಡಳಿತವನ್ನು ವಹಿಸಿಕೊಳ್ಳ ಬೇಕೆಂತ ಮಹಾರಾಜರು ಬಿನ್ನವಿಸಿಕೊಂಡಿದ್ದರು. ಆಡಳಿತದಲ್ಲಿ ಸ್ವಾತಂತ್ರ್ಯವಿರುವಂತಿದ್ದರೆ ಬರುತ್ತೇವೆಂದು ತಿಳಿಸಿದರು. ಆ ಭರ ವಸೆಯೂ ಬಂದಿತು. ಕೂಡಲೆ ಕಾರ್ಖಾನೆಯ ಆಡಳಿತವನ್ನು ವಹಿಸಿ ಕೊಂಡರು. ವೆಚ್ಚವನ್ನು ಕಡಿಮೆ ಮಾಡಿದರು. ಕಚ್ಚಾವಸ್ತುಗಳ ಬೆಲೆ ಯನ್ನು ತಗ್ಗಿಸಿದರು. ಕಾರ್ಖಾನೆಯ ಜವಾಬ್ದಾರಿ ಸ್ಥಾನಗಳಿಗೆ ಭಾರ ತೀಯರನ್ನೇ ನಿಯಮಿಸಿದರು. ಇದರಿಂದ ಕಾರ್ಖಾನೆ ಚೇತರಿಸಿಕೊಂ ಡಿತು. ಇಲ್ಲಿನ ಕಬ್ಬಿಣವನ್ನು ಅಮೇರಿಕಾದಲ್ಲಿ ಮಾರಲಾಯಿತು. ೧೯೨೯ ರಲ್ಲಿ ಕಾರ್ಖಾನೆಯ ಆಡಳಿತವನ್ನು ಸರ್ಕಾರಕ್ಕೆ ವಹಿಸಿಕೊಟ್ಟರು. ಆಗ ಅದು ಲಾಭ ಗಳಿಸುವ ಸ್ಥಿತಿಯಲ್ಲಿತ್ತು. ಇಂದು ಭಾರತದ ಪ್ರಮುಖ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳಲ್ಲಿ ಇದೂ ಒಂದು. ಇದ

ಮಧ್ಯೆ ಕಾವೇರಿ ನಾಲೆಯ ಮೇಲ್ವಿಚಾರಣಾ ಕಾರ್ಯವನ್ನೂ ಇವರಿಗೇ ಒಪ್ಪಿಸಲಾಯಿತು.

ಅನಂತರ ವಿಶ್ವೇಶ್ವರಯ್ಯನವರು ವಿವಿಧ ಹಂತಗಳಲ್ಲಿ ವಿವಿಧ ಮಟ್ಟಗಳಲ್ಲಿ ಭಾರತದ ಸೇವೆ ಸಲ್ಲಿಸಿದರು. ಅನೇಕ ಸಮಿತಿಗಳ ಅಧ್ಯಕ್ಷರಾಗಿದ್ದರು. ಮುಖ್ಯವಾಗಿ ಆರ್ಥಿಕ ಹಾಗೂ ಕೈಗಾರಿಕಾ ಸಮಿತಿಗಳಿಗೆ ಅಧ್ಯಕ್ಷರಾಗಿ, ವಿಪುಲವಾದ ವರದಿಗಳನ್ನು ಸಲ್ಲಿಸಿದರು.

ಭಾರತ ದೇಶಕ್ಕೊಂದು ಯೋಜನೆಯನ್ನು ಇವರು ಮೊದಲು ನಿರ್ಮಿಸಿದರು. ಗ್ರಾಮಗಳ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಇವರು ತಯಾರಿಸಿದರು. ಇವೆಲ್ಲ ಪ್ರಯತ್ನಗಳು ಭಾರತದಲ್ಲೇ ಮೊಟ್ಟ ಮೊದಲಿನದು ಎಂದರೆ ಅತಿಶಯೋಕ್ತಿಯಲ್ಲ.

ವಿಶ್ವೇಶ್ವರಯ್ಯನವರ ಕಾರ್ಯದಕ್ಷತೆಯನ್ನು ಗಮನಿಸಿ, ಬ್ರಿಟಿಷರು ಸಿ. ಪಿ. ಐ. ಮತ್ತು ಕೆ. ಸಿ. ಪಿ. ಐ. ಬಿರುದುಗಳನ್ನು ನೀಡಿದರು. ಆನಂತರ ಅನೇಕ ವಿಶ್ವವಿದ್ಯಾನಿಲಯಗಳು ಅವರಿಗೆ ಡಾಕ್ಟರೇಟ್ ಪದವಿಗಳನ್ನಿತ್ತು ಗೌರವಿಸಿದೆ. ೧೯೫೫ರಲ್ಲಿ 'ಭಾರತರತ್ನ' ಎಂಬ ಪ್ರಶಸ್ತಿಯನ್ನು ಭಾರತ ಸರ್ಕಾರವು ನೀಡಿತು.

ಇಂಗ್ಲೀಷ್ ಭಾಷೆಯಲ್ಲಿ ಯೋಜನೆಗಳ ಬಗ್ಗೆ ಅನೇಕ ಪುಸ್ತಕಗಳನ್ನು ರಚಿಸಿದ್ದಾರೆ. ಹೊಸ ಹೊಸ ವಿಷಯಗಳನ್ನು, ಅನ್ವೇಷಣೆಗಳನ್ನು ಅವುಗಳಲ್ಲಿ ಅವರು ವಿವರಿಸಿದ್ದಾರೆ.

ದಿನಾಂಕ ೧೫ ಸೆಪ್ಟೆಂಬರ್ ೧೯೬೦ರಂದು ಭಾರತದಾದ್ಯಂತ ವಿಶ್ವೇಶ್ವರಯ್ಯನವರ ಶತಮಾನೋತ್ಸವವನ್ನು ಆಚರಿಸಲಾಯಿತು.





ಅವರು ತಮ್ಮ ಜೀವನದಲ್ಲಿ ಸಾಧಿಸಬೇಕಾದುದನ್ನು ಊಹೆಗೂ ಮೀರಿ, ಸಾಧಿಸಿದ್ದರು. ಜೀವನದುದ್ದಕ್ಕೂ ಕಷ್ಟ, ದುಡಿಮೆಗಳಲ್ಲೇ ನಿರತರಾಗಿದ್ದರು. ಎಲ್ಲವನ್ನೂ ದಾನಮಾಡಿದ್ದರು. ತಮಗಾಗಿ ಏನನ್ನೂ

ಮಾಡಿಕೊಳ್ಳಲಿಲ್ಲ, ಇಟ್ಟುಕೊಳ್ಳಲಿಲ್ಲ. ಅದುವರೆವಿಗೆ ಯಾವುದಕ್ಕೂ ಯಾರ ಸಹಾಯವನ್ನೂ ಅಪೇಕ್ಷಿಸದವರು. ಕೊನೆಗಾಲದಲ್ಲಿ ಪ್ರತಿಯೊಂದಕ್ಕೂ ಇತರರ ಸಹಾಯಕ್ಕಾಗಿ ಕೈಚಾಚಬೇಕಾಯಿತು. ತಮ್ಮ ಕಣ್ಣೆದುರಿಗೇನೇ ತಂದೆ, ತಾಯಿ, ಅಣ್ಣ, ತಮ್ಮಂದಿರು, ಬಂಧು ಬಳಗದವರು, ಅತ್ಯಂತ ಪರಿಚಯದವರು, ತಮ್ಮಂದಿರ ಮಕ್ಕಳು ಸಾವನ್ನು ಅಪ್ಪಿದುದನ್ನು ನೋಡಿದ್ದರು. 'ಯಮನನ್ನು ಹಿಂದೆ ಹೋಗೆಂದು' ಹೇಳಿದ ವ್ಯಕ್ತಿಯೇ ಮರಣವನ್ನು ನಿರೀಕ್ಷಿಸತೊಡಗಿದ್ದರು.

ಇದಕ್ಕೆ ಮೊದಲೇ ತಮ್ಮ ಉಯಿಲನ್ನು ಬರೆಸಿದ್ದರು. ಅವರಿಗೆ ತಮ್ಮ ಹುಟ್ಟೂರಿನ ಮೋಹ ಹೋಗಿರಲಿಲ್ಲ. ಮರಣಾನಂತರ ಅಂತ್ಯ ಕ್ರಿಯೆಗಳನ್ನು ತಮ್ಮ ಹಳ್ಳಿ (ಮುದ್ದೇನಹಳ್ಳಿ)ಯಲ್ಲೆ ನಡೆಸಬೇಕೆಂದು ತಮ್ಮ ಉಯಿಲಿನಲ್ಲಿ ಬರೆದಿದ್ದರು. 'ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ' ಎಂಬಂತೆ ಅವರ ಮಾತೃಭಕ್ತೀ ಹುಟ್ಟೂರಿನ ಅಭಿಮಾನವಾಗಿತ್ತು.

ಇವರು ತಮ್ಮ ತುಂಬು ಜೀವನವನ್ನು ದೇಶಕ್ಕಾಗಿ ಜನತೆಯ ನಲ್ಮೆಗಾಗಿ ಮುಡುಪಾಗಿರಿಸಿ, ತಾ|| ೧೬-೪-೧೯೬೨ ಬೆಳಿಗ್ಗೆ ೬-೪೦ ಕ್ಕೆ ಇಹಲೋಕದ ಯಾತ್ರೆಯನ್ನು ಮುಗಿಸಿದರು. ಇವರ ಸಾವಿನಿಂದ ಕರ್ನಾಟಕಕ್ಕೇ ಏಕೆ ಭಾರತಕ್ಕೇ ಅಪಾರವಾದ ನಷ್ಟವಾಯಿತು. ಲೋಕಕ್ಕೆ ಲೋಕವೇ ಶೋಕಿಸಿದರು. ಅವರ ಅಂತ್ಯ ಕ್ರಿಯೆಯು ಮುದ್ದೇನಹಳ್ಳಿಯಲ್ಲಿಯೇ ನಡೆಯಿತು.

ಇಂಥ ಪುಣ್ಯಜೀವಿಯ ಜೀವನದ ಧ್ಯೇಯವು ನಿತ್ಯ ಜೀವನದಲ್ಲೂ ಬಿಂಬಿಸಲಿ. ಅವರಿಟ್ಟ ಹೆಜ್ಜೆಯನ್ನು ತುಳಿದು ನೀವೂ ನಾಡಿಗೂ ನುಡಿಗೂ ಕೀರ್ತಿ ತರುವಿರೆಂದು ನಂಬಿಕೆಯಿದೆ.

## ಪ್ರಶ್ನೆಗಳು

೧. ವಿಶ್ವೇಶ್ವರಯ್ಯನವರು ತಮ್ಮ ವಿದ್ಯಾಭ್ಯಾಸಕ್ಕಾಗಿ ಏನೇನು ಕಷ್ಟಪಟ್ಟರು ?

೨. ಅವರು ಯಾವ ಯಾವ ಹುದ್ದೆಗಳನ್ನು ಅಲಂಕರಿಸಿದರು ?

೩. ವಿಶ್ವೇಶ್ವರಯ್ಯನವರಿಂದ ನಮ್ಮ ನಾಡಿಗೂ, ಇತರ ಅಕ್ಕಪಕ್ಕದ ದೇಶಗಳಿಗೂ ಆದ ಉಪಯೋಗವೇನು ?

೪. ಇವರ ಜೀವನ ಚರಿತ್ರೆಯನ್ನು ಓದಿದ ಮೇಲೆ ನಿಮ್ಮ ಮನಸ್ಸಿನಲ್ಲಿ ಆಗಿರುವ ಪರಿಣಾಮವೇನು ? ನೀವು ನಿಮ್ಮ ನಾಡಿಗೆ ಹೇಗೆ ಸೇವೆ ಸಲ್ಲಿಸುತ್ತೀರಿ ?

894

ಕನ್ನಡದ ಕಡುಗಲಿಗಳು

ಕನ್ನಡದ ಕವಿ ಪುಂಗವರು

ಆಧುನ
ಕರ್ನಾ
ನಿರ್ಮಾಪಕ

ಕರ್ನಾಟಕ
ವೈಭ

ಕರ್ನಾಟಕ
ಸುವರ್ಣ ಯು




ಇಂಡಿಯಾ ಬುಕ್ ಹೌಸ್ — — ಬೆಂಗಳೂರು